ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧೧—೧೧—೧೯೩೮.

ಸಂಪುಟ ೧೮] [ಸಂಚಿಕೆ ೨೦

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund
1931	2,26,82,430	2.91,880	33,24,809
1933	3,07,98,435	3,54,003	50.04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

14

Bombay Life Building Udipi	Gautam Nivas Charni Road Girgaum. Bombay 4	Visweswarapuram Circle, Bangalore City	Puthiyara, Calicut	Car Street, Mangalore	Ottapalam S. Malabar.	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: RESERVE BANK OF INDIA, & BANKERS' CLEARING HOUSE, MADRAS.

Paid up Capital .... Rs. 3,03,205/-
Reserves .... ,, 3,88,842/-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-49

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,770	0	0
ಜಮೂಬಂದ ಠೇವಣಾತಿ	– 2,45,269	2	4
ವಸೂಲಾದ ಕ್ಷೇಮನಿಧಿ	– 1,36,696	8	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 19,598	4	11
ತ್ರಿಪ್ಟ್ ಡಿಪಾಜಿಟ್ಟು	– 34,431	6	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಬ್ಯಾಂಕಿನ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural &
Industrial Bank Ltd

52-24

ರುಂಡೂರವರ.	"ZANDU" ರುಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ರುಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ರುಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥೆ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-14) ಮತ್ತು ಆಯುರ್ವೇದ ವಿದ್ವಾನ್
ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ.

(ಸುವರ್ಣ, ಸಾಲಾಮಿಶ್ರಿ, ಕಲ್ಮದೆ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರವ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ.

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲ್ಟೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಾಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಷ್ಚರ್.

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅಠೆಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲ್ಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಜೇಷ್ಟ, ಕಫ್ಕ ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಲೆ ಸಂಗತಿ ಬರೆವಲ್ಲಿ ರೋಗಕ್ಕೆ ತಕ್ಕದಾವ ಔಷಧಿ ರವಾನಿಸಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ವಿ. ಬಿ. ಕಾಮತ್, ಮಡಿಕೇರಿ. (3) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (5) ಸುಂದರ್ ಪೈಫು, ಸುಳ್ಯ. (6) ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು. [19]

ವಿವಿಧ ವಿಚಾರ.

ಸೆರೆಯ ಸುಖ.

ಅನುಭವಿಸಲು ಸಿದ್ಧರಾದವರೂ, ಇದ್ದಾರೆಂದು ತಿಳಿದಿದೆ. ಅವರಲ್ಲೂ ಹಣ ಸಿಗುವುದಾದರೆ ಎಷ್ಟು ಮಂದಿ ಸಿದ್ಧರಾಗರು? ಪೋಲೆಂಡಿನ ಸ್ತ್ರಿಯೊಬ್ಬಳು ಮೂರು ದನಕ್ಕೆ ಹತ್ತು ಶಿಲ್ಲಿಂಗ್‌ಗಳಂತೆ ತೆಗೆದುಕೊಂಡು ಅನೇಕ ಸ್ತ್ರೀದರೋಡೆಕೋರರ ಬದಲು ತಾನು ಸೆರೆಮನೆ ಸೇರಿ ಸೆರೆ ಅನುಭವಿಸಿ ಹಿಂದಿರುಗುತ್ತಿದ್ದಳು. ಆದರೆ ಈ ರೀತಿ ಅಲ್ಪ ಸ್ವಲ್ಪ ಹಣ ಗಳಿಸುವುದರೊಳಗಾಗಿಯೇ ಪೊಲೀಸರಿಗೆ ಆಕೆಯ ಉದ್ಯೋಗದ ಗೂಢ ತಿಳಿಯಿತು. ಈಗ ಆಕೆ ತನ್ನ ಸ್ವಂತದ ಖರ್ಚಿನಲ್ಲಿಯೇ ಸೆರೆಯಲ್ಲಿರುವಳು.

—೦೦—

ನಮ್ಮ ಮಂತ್ರಿಗಳು ಹೀಗಾದರೇ?

ಸ್ವೀಡನ್ ದೇಶದ ಪ್ರಧಾನರೆಂದರೆ, ಅವರು ಜಗತ್ತಿಗೆ ಆದರ್ಶರು. ಅದರಿಂದಲೇ ಇಂದು, 1914ರಲ್ಲಿ ಅವರಿಗೆ ದೊರೆತ ಗದ್ದುಗೆ ಇನ್ನೂ ಖಾಲಿಯಾಗಲಿಲ್ಲ. ಇಲ್ಲಿ ನ್ಯಾಯಖಾತೆ, ಖಾನೂನು ಸೈನ್ಯ ಮುಂತಾದುವುಗಳಿಲ್ಲವೂ, ನೇರಾಗಿ ಇಬ್ಬರು ಅಧಿಕಾರಿಗಳ ಕೈಯಲ್ಲಿರುವುದರಿಂದ, ವರ್ಷಗಟ್ಟಲೆ ಆಂದೋಲನವನ್ನು ಮಾಡಿದರೂ, ನಾವು ಪಡೆಯದ ಫಲವನ್ನು ಅಲ್ಲಿನ ಮಂದಿ ಕೆಲ ದಿನಗಳಲ್ಲೇ ಪಡೆಯಲು ಅನುಕೂಲವಾಗಿದೆ. ಪ್ರಧಾನರು ಈ ಅಧಿಕಾರಿಗಳ ಮೇಲಿನವರು. ಪ್ರತಿ ದಿನ ಆಫೀಸಿಗೆ ಸಾಮಾನ್ಯ ಮನುಷ್ಯನಂತೆ ಅದೇ ಉಡುಗೆಯಲ್ಲಿ ಸಾರ್ವಜನಿಕ ಟ್ರಾಮಿನಲ್ಲೇ ಹೋಗಿ ಮನೆಗೆ ಹಿಂತಿರುಗುವರು. ಬಡವರ ಗೋಳನ್ನು ತಿಳಿದುಕೊಳ್ಳುವರು. ಆದೊಮ್ಮೆ, ಅವರು ಬಸ್ಸಿನ ಕಂಡಕ್ಟರನನ್ನು ಮನೆಗೆ ಕರೆಯಿಸಿ ಅವನೊಡನೆ ಆಟವಾಡಿದ್ದರು. ಬಡವರಂತೆ ಜೀವಿಸಿ, ಬಡವರ ಗೋಳನ್ನು ತಿಳಿಯುವ ಇವರಂತಾದರೂ ನನ್ನ ಮಂತ್ರಿಗಳಾವರೆ ಸಾಕು!

—೦೦—

ಕೆಲವು ಪ್ರಭುತ್ವಗಳಲ್ಲಿ.

ಕೈಕೆಳಗಿನ ಪ್ರಜೆಗಳನ್ನು ಬೆಕ್ಕು ಇಲಿಯನ್ನು ಆಡಿಸುವಂತೆ ಆಳುತ್ತಿರಬೇಕು ಎಂದು ಕೆಲವರ ವ್ಯಾಖ್ಯಾನ. ಅದರಂತೆ, ಲಂಡನಿನ ವಿಲ್ಲಿಯಂ ಹೇರ್ನ್ ಎಂಬ ರೈಲು ಗಾಡಿ ಪರೀಕ್ಷಕ, ಆತನ ಹೆಂಡತಿ ಕೋನ್ಸ್‌ಟೆನ್ಸ್ ಅವರಿಬ್ಬರು ಮನುಷ್ಯರಾರೂ ಸಿಗದ್ದರಿಂದಲೋ ಎಂಬಂತೆ ಒಂದು ಬೆಕ್ಕನ್ನು ತಂದು ಮನೆಯಲ್ಲಿ ಕಟ್ಟಿ ಹಾಕಿದರು. ಅದೂ ಏಳು ವರ್ಷಗಳ ತನಕ. ಇದರಿಂದ ಆ ಬೆಕ್ಕಿನ ಮೈ ಕೈ ಎಲುಬುಗಳು ಮುರಿದು ಹೋಗಿ, ಅಪ್ರಯೋಜಕವಾಯಿತು. ಪೊಲೀಸರು ಪಾಣಿಯ ಚಿತ್ರ ಹಿಂಸೆಗಾಗಿ ಇವರ ಮೇಲೆ ದಾವೆ ತಂದ್ರು ಇಬ್ಬರಿಗೂ ಎರಡು ಪವನುಗಳ ದಂಡವನ್ನೂ, ದಾವಾ ವೆಚ್ಚ ಎರಡು ಪವನು ಎರಡು ಶಿಲ್ಲಿಂಗುಗಳನ್ನೂ ವಿಧಿಸಿದರು. ಕೋರ್ಟಿನಲ್ಲಿ ದಂಪತಿಗಳು ತಾವು ಪ್ರೀತಿಯಿಂದ ಬೆಕ್ಕನ್ನು ಸಲಹುತಿದ್ದವೆಂದರು. ಆದರೆ ಪ್ರಜೆಗಳನ್ನು ಇವಕ್ಕಿಂತಲೂ ಪ್ರೀತಿಯಿಂದ ಸಾಕುವವರಿಗೆ ಯಾರೂ ಏನೂ ಮಾಡಿಲ್ಲವೆಂಬುದೇ ಸ್ವಾರಸ್ಯ.

—೦೦—

ನೂತನ ಸೂರ್ಯಮಂಡಲ.

ಬಹು ದೂರದಲ್ಲಿ ಸರ್ವಸಾಧಾರಣವಾಗಿ ಪ್ರಪಂಚದ ಗಡಿಯಲ್ಲೆಂಬಂತೆ ಒಂದು ನೂತನ ಸೂರ್ಯಮಂಡಲ ವಿದೆಯೆಂಬುದನ್ನು ಡಾ. ಹೋವಾರ್ಡ್ ಎಂಬವರು ಕಂಡು ಹಿಡಿದಿರುವರು. ಈ ಮಂಡಲದಲ್ಲಿ ಐದು ಸಾವಿರಕ್ಕೆ ಮಿಕ್ಕಿದ ನಕ್ಷತ್ರಗಳು ಇರುವುದಂತೆ. ಅವುಗಳಿಂದ ಹೊರಟ ಪ್ರಕಾಶವು ಪ್ರಪಂಚವನ್ನು ಮುಟ್ಟಲು ಮೂರು ಲಕ್ಷ ವರ್ಷಗಳು ಬೇಕಾಗುತ್ತವಂತೆ. ಅಂದರೆ ಗಣಿತ ಶಾಸ್ತ್ರಜ್ಞರ ಗಣಿತದ ಪ್ರಕಾರ ಈ ಸೂರ್ಯಮಂಡಲವು ಸಾಧಾರಣ 18,000,000 ಮಿಲಿಯ ಮೈಲುಗಳಷ್ಟು ದೂರದಲ್ಲಿರುವುದು.

—೦೦—

ನಾಜಿರಾಜ್ಯದಲ್ಲಿ ನಾಯಿ ಮಾಂಸ ಭಕ್ಷಣೆ.

ಜರ್ಮನಿಯಲ್ಲಿ ಆಹಾರ ಸಾಮಗ್ರಿಗಳ ಕೊರತೆ ಇದೆ. ಗೋಧಿ, ಮಾಂಸ ಆಹಾರ ಸೇವನೆಯಲ್ಲಿ ನಿರ್ಬಂಧವಿದೆ. ಇತರ ಮಾಂಸಗಳನ್ನು ಉಳಿಸುವುದಕ್ಕಾಗಿ ನಾಯಿಯ ಮಾಂಸ ಉಪಯೋಗಿಸಬೇಕೆಂದು ಸರ್ಕಾರದ ಹುಕುಂ.

—೦೦—

ಕಾಗದದ ಮನೆ.

ಅಮೇರಿಕದಲ್ಲಿ ಎಲೀಸ್ ಸ್ಟೇನ್‌ಮೂನೆ ಎಂಬಾಕೆಯು ಇಡೀ ಮನೆಯನ್ನು ಕಾಗದದಿಂದ ನಿರ್ಮಿಸಿರುವಳು. ಕದಗಳು, ಕಿಟಕಿಗಳು ಮತ್ತು ಮೂಡು ವಿರಹಿತ, ಆ ಮನೆಯನ್ನು ತಯಾರಿಸಲು ನೂರು ಸಾವಿರ ವಾರ್ತಾ ಪತ್ರಿಕೆಗಳ ಕಾಗದವನ್ನು ಉಪಯೋಗಿಸಲಾಗಿದೆ. ಆ ಮನೆಯೊಳಗಿದ್ದ ಕುರ್ಚಿ ಮೇಜುಗಳನ್ನು ಕೂಡ ಕಾಗದದಿಂದಲೇ ನಿರ್ಮಿಸಲಾಗಿದೆ. ಆದೊಂದು ಬಗೆಯ ನೂತನ ರೀತಿಯಲ್ಲಿ ಆ ಕಾಗದಗಳನ್ನು ಹಿಸುಕಿ ಅವುಗಳು ಉದ್ದೆ ಸುರುಳಿಗಳಾಗಿ ಪೂಡಲ್ಪಟ್ಟಿತು. ಹೀಗೆ ತಯಾರಿಸಿದ ಸುರುಳಿಗಳು ಬಲವಾಗಿರುವುದಲ್ಲದೆ ತುಂಬಾ ಬಾಳಿಕೆಯೆಳ್ಳವುಗಳಾಗಿರುವವು.

ಆದರೆ ಇವರಲ್ಲಿ ವಿಚಿತ್ರವಾದ ಸಂಗತಿಯೆಂದರೆ ಆ ಮನೆಯ ಯಾವ ಭಾಗವನ್ನಾದರೂ ಕಳಚಿ ತೆಗೆದು ಓದಲಾಗುತ್ತದೆ.

—೦೦—

ಬಂಗಾರದ ದ್ರಾವಕ.

ಆಗ್ರಾ ವಿದ್ಯಾಲಯದ ಪ್ರೊಫೆಸರರಾದ ಜೆ. ಬಿ. ಜಹಾ ಎಂಬವರು ಇಂದಿಗೆ 20 ವರ್ಷಗಳಿಂದ ನಡೆಸುತಿದ್ದ ಶೋಧೆಗಳ ಫಲವಾಗಿ ಸಾಮಾನ್ಯ ವಸ್ತುಗಳಿಂದ ದ್ರವರೂಪವಾದ ಬಂಗಾರವನ್ನು ತೆಗೆಯಲು ಸಾಧ್ಯವಿದೆಯೆಂದು ಗೊತ್ತು ಹಚ್ಚಿರುವರು. ಈ ದ್ರವವನ್ನು ಗ್ಲಾಸು ಮತ್ತು ಗಾಜಿನ ಮೇಲೆ ಚಿತ್ರಗಳನ್ನು ಬಿಡಿಸಲು ಉಪಯೋಗಿಸುತ್ತಾರೆ. ತನ್ನ ಶೋಧೆಯನ್ನು ಇನ್ನೂ ಮುಂದರಿಸುವಂತೆ ಡಾ. ಜಹಾರವರಿಗೆ ಸಂಯುಕ್ತ ಪ್ರಾಂತ್ಯದವರು ಧನ ಸಹಾಯವನ್ನು ಮಾಡಿರುವರೆಂದು ತಿಳಿದು ಬರುತ್ತದೆ.

ಸುವರ್ಣ ಭೂಮಿ ಎನಿಸಿದ್ದ ಭಾರತವು ವಿವರ್ಣವಾಗಿರಲು ಡಾ. ಜಹಾರವರು ತನ್ನ ಶೋಧೆಯಿಂದ ಕೃತಕ ಚಿನ್ನವನ್ನು ಮಾಡಿದರೂ ವಿವರ್ಣವಾಗಿರುವ ಭಾರತದ ಸುವರ್ಣತೆಯು ಬರುವುದೇ?

—೦೦—

ಹೇಂಟೆಗಳು ಚರ್ಚ್ಮೆಕ ತತ್ತಿಗಳನ್ನಿಡುವಂತೆ ಯತ್ನ.

ತತ್ತಿಗಳನ್ನು ಒಂದು ಸ್ಥಳದಿಂದ ಇನ್ನೊಂದೆಡೆಗೆ ಕಳುಹಿಸುವಾಗ ಒಡೆಯದಂತೆ ಹೇಂಟೆಗಳ ತತ್ತಿಗಳನ್ನು ಚರ್ಚ್ಮೆಕವಾಗಿ ಮಾಡಲು ಯುನೈಟೆಡ್ ಸ್ಟೇಟ್ಸಿನ ಕೃಷಿ ಇಲಾಖೆಯ ತಜ್ಞರು ಶೋಧನೆ ನಡಿಸುತ್ತಿರುವರು. ಹೇಂಟೆಯ ಆಹಾರದಲ್ಲಿ ಸುಣ್ಣದಂಶವನ್ನು ಕಡಿಮೆ ಮಾಡಿ ಚರ್ಚ್ಮೆಕ ತತ್ತಿಗಳನ್ನು ತಯಾರಿಸಬಹುದೆಂದು ಅವರ ನಂಬಿಕೆ. ಹೇಂಟೆಗಳು ಬಹುತೇಕ ಚಿಪ್ಪಿಲ್ಲದ ತತ್ತಿಗಳನ್ನಿಡುವಂತೆ ಮಾಡಿ ಅವುಗಳ ಮೇಲೆ ಗಟ್ಟಿಯಾದ ಪದಾರ್ಥವೊಂದನ್ನು ಸಾರಿಸಿ ಚೌಕಟ್ಟಿನೊಳಗಿರಿಸಿ ಚೌಕಾ ಕೃತಿಯಾಗಿ ಮಾಡಬಹುದು. ಬಾಗಿದ ನೇಂದ್ರ ಬಾಳೆಗಳನ್ನು ಪೇಕ್ ಮಾಡಲು ಹೆಚ್ಚು ಸ್ಥಳ ಬೇಕಾಗುವುದರಿಂದ ಕೋಲಿನಂತೆ ನೆಟ್ಟಗಿನ ಬಾಳೆಹಣ್ಣುಗಳನ್ನು ತಯಾರಿಸುವ ಯತ್ನವೂ ನಡೆದಿದೆ.

—೦೦—

ಎರಡು ತಲೆ ನಾಲ್ಕು ಕೈಗಳ ಮಗು.

ರಷ್ಯದ ಮಾಸ್ಕೋ ಪಟ್ಟಣದಲ್ಲಿ ಲೋಕದ ಅತಿ ವಿಚಿತ್ರ ಅವಳಿ ಜವಳಿ ಮಕ್ಕಳಿರುವವು. ಈರಾ ಮತ್ತು ಗಾಲ್ಯಾ ಎಂಬವುಗಳ ಹೆಸರು. ಇವುಗಳಿಗೆ ಪ್ರತ್ಯೇಕ್ಕ ತಲೆ, ತೋಳು, ಹೃದಯ, ಬೆನ್ನೆಲುಬು ಮತ್ತು ಹೊಟ್ಟೆಗಳಿರುವವು. ಆದರೆ ತೋರವಾದ ಒಂದೇ ದೇಹ ಮತ್ತು ಎರಡೇ ಕಾಲುಗಳಿರುತ್ತವೆ. ನರಗಳೆಲ್ಲಾ ಪ್ರತ್ಯೇಕ ಪ್ರತ್ಯೇಕವಾಗಿರುತ್ತವೆ. ಆದರೆ ರಕ್ತ ಪ್ರವಾಹವೊಂದೇ. ಈರಳ ಕೈಗೆ ಚಿವುಟಿದಾಗ ಅವಳು ಮಾತ್ರ ಕೂಗುವಳು. ಆಗ ಗಾಲ್ಯಳು ನಗುವಳು. ಒಬ್ಬಳನ್ನು ಬಿಟ್ಟು ಇನ್ನೊಬ್ಬಳು ನಿದ್ದೆ ಹೋಗಬಲ್ಲಳು. ಈಗ ಈ ಮಕ್ಕಳಿಗೆ ಒಂದು ವರ್ಷವಾಗಿರುವುದು. ಗಾಲ್ಯಳಿಗೆ ಕೊಟ್ಟ ಆಹಾರದಿಂದ ಈರಳ ರುಚಿಯೇನೂ ತಣಿಯುವುದಿಲ್ಲ. ಗಾಲ್ಯಳ ಹೆಸರೆತ್ತಿ ಕರೆದಾಗ ಅವಳು ತಲೆಯೆತ್ತಿ ನಸು ನಗುವಳು. ಈರಳು ಸುಮ್ಮಗಿರುವಳು. ಈ ಶಿಶುಗಳ ಬೆಳವಣಿಗೆಯನ್ನು ರಷ್ಯದ ವಿಜ್ಞಾನಿಗಳು ಪರೀಕ್ಷಿಸುತ್ತಿರುವರು. ಈ ಪರೀಕ್ಷೆಯಿಂದ ತಿಳಿದು ಬಂದ ಒಂದು ವಿಷಯವೆಂದರೆ ನರಗಳೆಂಪ ನಿದ್ದೆ ಬರುವಂತೆ ಮಾಡಬಹುದೇ ಹೊರತು ರಕ್ತ ಪ್ರವಾಹಕ್ಕೆ ನಿಷ ಸೇರಿಸಿಯಲ್ಲೆಂಬುದು.

—೦೦—

ಪ್ರಾತಿನಿಧ್ಯ ವಿವಾಹವೇನೆಂದು ಗೊತ್ತೇ?

ವಿಯನ್ನದ ಓರ್ವ ಐಶ್ವರ್ಯವಂತೆ ಎಹೂದಿ ಸ್ತ್ರೀಯಳು ಬಡ ಮುಸ್ಲಿಮ ಸೊಡನೆ ವಿವಾಹವಾಗಬೇಕಾಗಿ ಬಂತು. ಅವಳಿಗೆ ಯುಗೊಸ್ಲೇವಿಯವಲ್ಲಿ ಓರ್ವ ಬಾಪನಿದ್ದನಂತೆ. ಅವನ ಸಹಾಯದಿಂದ ನೂಹಿಬ್ ಎಂಬೊಬ್ಬ ಬಡ ಮುಸ್ಲಿಂ ತರುಣನೊಡನೆ ವಿವಾಹವು ನಡೆಯಿತು. ವಿವಾಹವು 'ಪ್ರಾತಿನಿಧ್ಯ ವಿವಾಹ' ಅವಳ ಬದಲಿಗೆ ಓರ್ವ ಪ್ರತಿನಿಧಿಯನ್ನು ನಿಲ್ಲಿಸಿ ಸಂಸ್ಕಾರವಾಯಿತು. ವಧು ವಿಯನ್ನದಲ್ಲಿ. ವರ ಯುಗೊಸ್ಲೇವಿಯದಲ್ಲಿ. ವಿವಾಹದಿಂದಾಗಿ ಅವಳು ಯುಗೊಸ್ಲೇವಿಯಾವ ಪ್ರಜೆಯಾದಳು; ಅವಳಿಗೆ ವಿಯನ್ನವನ್ನು ಬಿಟ್ಟು ಹೋಗಲು ಸಕಾರಣವಾದ ಆಧಾರ ದೊರೆತಂತಾಯಿತು. ಅವಳ ಸಂಪತ್ತು ಸುರಕ್ಷಿತವಾಯಿತು. ಇದರಲ್ಲಿ ಸಾರಸ್ಯವಾದುದೆಂದರೆ—ಮುದುವೆಯ ಒಪ್ಪಂದ. ಆ ಬಡ ಮುಸ್ಲಿಮನಿಗೆ 4 ಪವನು ಪ್ರತಿಫಲವ ಶರತದಿಂದ ಮದುವೆಯ ವ್ಯವಸ್ಥೆಯಾದೆಂದಂತೆ. ಅವನಿಗೆ ತನ್ನ ಹೆಂಡತಿಯನ್ನು ನೋಡಲು ಸಹ ಅವಕಾಶವಿಲ್ಲ. ನಾಜಿಗಳ ಪೀಡೆಯನ್ನು ನಿವಾರಿಸಲು ಇಷ್ಟೆಲ್ಲ ಕುತಂತ್ರಗಳು ನಡೆಯಬೇಕಾಯಿತು.

—೦೦—

ಕೃತ್ರಿಮ ವಸ್ತ್ರಗಳು.

ಆಹಾರದ ಅನಂತರ ಮನುಷ್ಯನಿಗೆ ಬೇಕಾದುದು ಅಚ್ಛಾದನ, ಎಂದರೆ ಉಡಿಗೆ. ಇದಕ್ಕೂ ರಸಾಯನ ಶಾಸ್ತ್ರದ ಸಹಾಯವೊದಗಬಹುದು. ಹತ್ತಿಯೇ ಮೊದಲಾದ ವಸ್ತುಗಳಿಂದ ಬಟ್ಟೆಬರೆಗಳನ್ನು ಮಾಡುತ್ತಾರೆ. ಆದರೆ ಹತ್ತಿನಾರು ಮೊದಲಾದುವನ್ನು ಅಪರಿಮಿತವಾಗಿ ಬೆಳೆಯಿಸಲಾಗುವುದಿಲ್ಲ. ರಸಾಯನ ಶಾಸ್ತ್ರ ರೀತಿಯ ಬೇರೆ ವಸ್ತುಗಳಿಂದ ಬಟ್ಟೆ ಬರೆಗಳನ್ನು ಮಾಡುವುದು ಸಾಧ್ಯವಾಗಿದೆ. ಮರದ ತಿರುಳಿನಿಂದ ವಸ್ತ್ರಗಳನ್ನು ಮಾಡಬಹುದು. ಎಲ್ಲ ಸಸ್ಯಗಳಲ್ಲಿಯೂ ದೊರೆಯುವ ಒಂದು ಪದಾರ್ಥದಿಂದ ಕೃತ್ರಿಮ ಚರ್ಮವನ್ನು ನಿರ್ಮಿಸಬಹುದು. ಮರದ ಬೆಂಡಿನಿಂದ ಚರ್ಮವನ್ನು ನಿರ್ಮಿಸಬಹುದು. ಮರದ ಬೆಂಡಿನಿಂದ ಕಾಗದವನ್ನು ಮಾಡಬಹುದು. ಆದುದರಿಂದ ಕೈಗಾರಿಕೆಯ ಅಭಿವೃದ್ಧಿಯು ರಸಾಯನ ಶಾಸ್ತ್ರದ ಅಭಿವೃದ್ಧಿಯನ್ನು ಹೊಂದಿಕೊಂಡಿದೆ ಎಂದರೆ ತಪ್ಪಾಗದು. ರಾ. ಸಭೆಯವರು ಕೈಗಾರಿಕೆಯ ಅಭಿವೃದ್ಧಿಗಾಗಿ ಅಖಿಲಭಾರತಕ್ಕೆ ಸಂಬಂಧಪಟ್ಟ ಒಂದು ಸಮಿತಿಯನ್ನು ರಚಿಸಿರುವರೆಂಬುದು ಸಂತೋಷಾಸ್ಪದವಾಗಿದೆ.

—೦೦—

ಕೌನ್ಸಿಲು ಮಾಟಂಗು.

ರೈತರ ಸಾಲ ನಿವಾರಿಸಲು ಇಂಡಿಯೂ ಸರ್ಕಾರದಿಂದ ಸಾಲ ಪಡೆಯಬೇಕು.

ಶಾಲೆಗಳಲ್ಲಿ ಹಿಂದಿಯು ಖಡ್ಡಾಯವಾಗಿ ಕಲಿಸಲ್ಪಬೇಕು.

ಬೀಡಿ ಸಿಗರೇಟು ಮತ್ತು ನಿಷಪದಾರ್ಥಗಳನ್ನು ಸೇವಿಸುವ 18 ವರ್ಷಕ್ಕೆ ಒಳಪಟ್ಟ ಯುವಕರು ಶಿಕ್ಷಿಸಲ್ಪಡಬೇಕು.

●

20. 'ಸಾರ್ವಜನಿಕ ಉದ್ಯೋಗಗಳಲ್ಲಿ, ಕೋಮುವಾರು ಸರತಿ ಮೇರೆ ಎಲ್ಲಾ ವರ್ಗದವರಿಗೆ ಪ್ರಾತಿನಿಧ್ಯ ಸಿಕ್ಕದೆ ಒಂದೇ ಪಂಗಡದವರು ಪ್ರತಿನಿಧ್ಯದಲ್ಲಿರಬಹುದಾದ್ದರಿಂದ ಆದನ್ನು ಹೋಗಲಾಡಿಸಲು ಕೋಮುಗಳ ಜನಸಂಖ್ಯೆಯ ದಾಮಶಾಯಿ ಮೇರೆ ಉದ್ಯೋಗಗಳು ದೊರೆಯಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಯಸ್. ರಾಮಮೂರ್ತಿಯವರು-ಸೂಚಿಸಿ ಕೋಮುವಾರು ಪ್ರತಿನಿಧಿತ್ವದ ಮೇರೆ ಸರ್ಕಾರಿ ಉದ್ಯೋಗ ಕೊಡಬೇಕೆಂಬ ತತ್ವವು ಎಲ್ಲ ಕಡೆಯಲ್ಲಿಯೂ ಜಾರಿಯಲ್ಲಿದೆ. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸಿನವರೂ ಒಪ್ಪಿರುವರು. ಒಂದೇ ಕೋಮಿನವರಿಗೆ ಹೆಚ್ಚಿನ ಉದ್ಯೋಗ ಇರಬಾರದು. ಉದ್ಯೋಗಸ್ಥರು ಸಾಗು ಓಟರುಗಳ ಅಭಿಪ್ರಾಯಕ್ಕೆ ಬೆಲೆಯೇ ಕೊಡುತ್ತಿಲ್ಲ. ತಮಗೆ ಬೇಕಾದವರಿಗೆ ಉದ್ಯೋಗ ಕೊಟ್ಟುಕೊಳ್ಳುತ್ತಾರೆ. ಇಂಡಿಯೂ ಸರ್ಕಾರವೂ ಈ ತತ್ವಕ್ಕೆ ಒಪ್ಪಿದೆ. ಕೊಡಗಿನಲ್ಲಿಯೂ ಕೋಮುಗಳ ಜನಸಂಖ್ಯೆಯ ದಾಮಶಾಯಿ ಮೇರೆ ಉದ್ಯೋಗ ಕೊಡಬೇಕು.

ಫೈನಾನ್ಸ್ ಮೆಂಬರು-ಮದ್ರಾಸಿನಲ್ಲಿ ಈ ಪದ್ಧತಿಯು ಹಲವು ವರ್ಷಗಳಿಂದ ಜಾರಿಯಲ್ಲಿದೆ. ತಕ್ಕ ಅರ್ಹತೆಗಳಿಪ್ಪರೆ ಹಿಂದೆ ಬಿದ್ದ ಪಂಗಡಗಳವರಿಗೆ ಉದ್ಯೋಗ ಕೊಡುವ ಆಲೋಚನೆ ನಡೆಯುತ್ತಾ ಇದೆ.

ಮೆ. ಐ. ಪಿ ಕಾರ್ಯಪ್ಪನವರು-ಕೊಡಗಿನಲ್ಲಿ ಕೋಮುವಾರು ವಿಷಯ ಇರಲಿಲ್ಲ. ಗ್ರಾಮಗಳಲ್ಲಿ ಎಲ್ಲರೂ ಸಹೋದರ ಭಾವದಲ್ಲಿರುವರು. ವಿದ್ಯಾವಂತರು ಇನ್ನು ಕೋಮುವಾರು ತತ್ವವನ್ನು ಹರಡಿ ಜನರಲ್ಲಿ ವೈಮನಸ್ಸು ಹೆಚ್ಚಿಸುವುದು ಯೋಗ್ಯವಲ್ಲವಾದ ಕಾರಣ ಈ ಠರಾವಿಗೆ ವಿರೋಧಿಸುತ್ತೇನೆ.

ಮೆ. ಯನ್. ಸೋಮಣ್ಣನವರು-ಸರ್ಕಾರಿ ಉದ್ಯೋಗದಲ್ಲಿ ಎಲ್ಲಾ ಕೋಮಿನವರಿಗೂ ಸರಿಸಮಾನ ಅವಕಾಶ ಕೊಡುವುದರಿಂದ ಗ್ರಾಮಗಳಲ್ಲಿ ಕೋಮುವಾರು ದ್ವೇಷವೆಂಬಿಗೂ ಹುಟ್ಟಲಾರದು. ಹಿಂಬುಳಿವ ಪಂಗಡದವರು ಮತ್ತು ಅಲ್ಪ ಸಂಖ್ಯಾತರಿಗೆ ಈಗ ಉದ್ಯೋಗಗಳಲ್ಲಿ ಸಾಕಷ್ಟು ಸ್ಥಳವಿಲ್ಲ. ಅರ್ಹತೆಗೂ ಬೆಲೆಕೊಡಬೇಕು. ಠರಾವಿಗೆ ತನ್ನ ಒತ್ತಾಸೆ ಇದೆ.

ಕೋಮುವಾರು ತತ್ವವನ್ನು ಕಾಂಗ್ರೆಸು ಸಂಸ್ಥೆಯು ಒಪ್ಪಿಲ್ಲವೆಂದು ಹೇಳಬಲ್ಲೆ. ಈಗಿರುವ ಸ್ಥಿತಿಯಲ್ಲಿ ಅರ್ಹತೆಯ ಮೇರೆಯೇ ಯೋಗ್ಯರಾದ ಎಲ್ಲಾ ಕೋಮಿನವರಿಗೆ ಉದ್ಯೋಗ ಸಿಕ್ಕುತ್ತಿದೆ. ಈ ತತ್ವವನ್ನು ಜಾರಿಗೆ ತಂದು ಇಲ್ಲಿ ಶಾಂತಿಯಲ್ಲಿರುವ ಜನರಲ್ಲಿ ವೈಮನಸ್ಸು ಹುಟ್ಟಿಸುವುದು ಯೋಗ್ಯವಲ್ಲ. ಎಂದು ಮುಂತಾಗಿ ಮೆ. ಗಳಾದ ಕೆ. ಸಿ. ಕರುಂಬಯ್ಯನವರು ಮತ್ತು ಬಿ. ಯಂ. ಕಾರ್ಯಪ್ಪನವರು ಹೇಳಿ ಠರಾವನ್ನು ವಿರೋಧಿಸಿದರು.

ಮೆ. ಕೆ. ಯಂ. ದೇವಯ್ಯನವರು-ಎಲ್ಲಾ ಕೋಮಿನವರಿಗೂ ಉದ್ಯೋಗಗಳಲ್ಲಿ ಸರಿಯಾದ ಭಾಗಕೊಡಬೇಕು. ಈ ದೃಷ್ಟಿಯಿಂದ ಕಾಂಗ್ರೆಸಿನವರು ಹರಿಜನರನ್ನು ಮೇಲಕ್ಕೆತ್ತುತ್ತಿರುವರು. ಠರಾವಿಗೆ ನನ್ನ ಬೆಂಬಲವಿದೆ.

ಮೆ. ಪಿ. ಐ ಬೆಳ್ಯಪ್ಪನವರು-ಕೋಮುವಾರು ತತ್ವಕ್ಕೆ ಕಾಂಗ್ರೆಸಿನ ಒಪ್ಪಿಗೆ ಇದೆಯೆಂಬುದು ನಿಜವಲ್ಲ. ಈ ತತ್ವದಿಂದ ಜನರಲ್ಲಿ ಸಹೋದರ ಭಾವವು ಕೆಡುವುದು. ಠರಾವಿನಲ್ಲಿ ಜಾತಿವಾರು, ಕೋಮುವಾರು ಯೂ ಪಂಗಡವಾರು ಹೇಗೆ ಪ್ರತಿನಿಧಿತ್ವ ಕೊಡಬೇಕೆಂದು ಸೂಚಿಸಿಲ್ಲ. ಇಂಡಿಯೂ ಸರ್ಕಾರದವರು ಮತವಾರು ಪ್ರತಿನಿಧಿತ್ವವನ್ನು ಐ. ಸಿ. ಯಸ್. ಚುನಾವಣೆಯಲ್ಲಿ ಮಾತ್ರ ಒಪ್ಪಿರುವರು. ಕಾಂಗ್ರೆಸಿನವರು ದಳಿತವರ್ಗದವರಾದ ಹರಿಜನರನ್ನು ಮೇಲಕ್ಕೆತ್ತಲು ಪ್ರಯತ್ನಿಸುವುದಲ್ಲದೆ ಕೋಮುವಾರು ತತ್ವವನ್ನು ಒಪ್ಪಿಲ್ಲ. ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆ.

ಫೈನಾನ್ಸು ಮೆಂಬರು ಹಿಂದೂದೇಶದ ಪ್ರಾಂತೀಕ ಸಂಸ್ಥೆಗಳು ಈ ತತ್ವವನ್ನು ಒಪ್ಪಿರುತ್ತವೆ. ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆ.

ಮೆ. ಕೋರನ ದೇವಯ್ಯನವರಲ್ಲದೆ ಕಾಂಗ್ರೆಸಿನವರು ವಿರೋಧವಾಗಿಯೂ, ಸರಕಾರಿ ಮೆಂಬರರು ಮತ್ತು ಇತರ ಚುನಾಯಿತ ದೇಶೀಯ ಮೆಂಬರರು ಪರವಾಗಿಯೂ ಓಟು ಮಾಡಿದರು. ಠರಾವು ಪಾಸಾಯಿತು. ಯೂರೋಪಿಯನ್ ಮೆಂಬರುಗಳು ಮತ್ತು ದೇವಯ್ಯನವರು ಓಟು ಮಾಡಲಿಲ್ಲ.

ಮೂರನೇ ದಿನ.

21. ಮೆ. ಕೆ. ಕರುಂಬಯ್ಯನವರು 'ಕೊಡಗಿನ ವ್ಯವಸಾಯಗಾರರ ಸಾಲವನ್ನು ನಿವಾರಿಸಲು ಇಂಡಿಯೂ ಸರ್ಕಾರದಿಂದ 30 ಲಕ್ಷ ರೂಪಾಯಿ ಸಾಲ ಪಡೆಯಲು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮಂಡಿಸಿ, ಕೆಲವು ವರ್ಷಗಳ ಹಿಂದೆ ಆರ್ಥಿಕ ಪರಿಶೋಧನಾ ಕಮಿಟಿಯವರು ಕೊಡಗಿನ ರೈತರ ಒಟ್ಟು ಸಾಲವು 75 ಲಕ್ಷವಿರಬಹುದೆಂದು ಅಂದಾಜು ಮಾಡಿದ್ದರು. ಆದರೆ ಇತ್ತೀಚೆಗೆ ಇದು ಏರಿ 1 ಕೋಟಿಗೆ ತಲಪಿರಬಹುದು. ರೈತರಿಗೆ ದೀರ್ಘ ಕಂತಿನ ಸಾಲ ಕೊಡದ ಪಕ್ಷ ಅವರು ತಮ್ಮ ಭೂಮಿ, ಮನೆ, ಮಠಗಳನ್ನು ಕಳಕೊಂಡು ಅನಾಥರಾಗಬಹುದು. ಆದ್ದರಿಂದ ರೈತರ ಉನ್ನತಿಗಾಗಿ ಸರ್ಕಾರವು ಇಂಡಿಯೂ ಸರ್ಕಾರದಿಂದ ಸಾಲ ಕೇಳುವುದು ಅವರ ಕರ್ತವ್ಯವೇ ಆಗಿದೆ ಎಂದರು.

ಮೆ. ಪಿ. ಜಿ. ಮುದ್ದಮ್ಮಯ್ಯನವರು ಅನುಮೋದಿಸಿದರು.

ಫೈನಾನ್ಸು ಮೆಂಬರು ಇಂಡಿಯೂ ಸರಕಾರವು ಇಷ್ಟು ದೊಡ್ಡ ಸಾಲ ಕೊಡಲು ಶಕ್ತವಲ್ಲವೆಂದೂ, ಠಕಾವಿ ಮತ್ತು ಭೂಮಿ ರೂಪಿತಕ್ಕಾಗಿ ದೊಡ್ಡ ಹಣ ಕೊಟ್ಟಿರುವರಲ್ಲದೆ ಈಗಲೂ 50,000 ರೂಪಾಯಿ ಸಾಲ ತೀರಿಸಲು ಹಣ ಕೊಟ್ಟಿರುವದರಿಂದ ಇಂಡಿಯೂ ಸರ್ಕಾರವನ್ನು ಕೇಳಲು ಅಸಾಧ್ಯವೆಂದೂ, ಆ ಪ್ರಯುಕ್ತ ಠರಾವನ್ನು ವಿರೋಧಿಸುತ್ತೇನೆಂದೂ ಹೇಳಿದರು.

ಮೆ. ಬಿ. ಯಂ. ಕಾರ್ಯಪ್ಪನವರು ಠರಾವನ್ನು ಸಮರ್ಥಿಸಿ ಮಾತಾಡಿದರು.

ಮೆ. ಯಂ. ಯಂ. ಬೆಳ್ಯಪ್ಪನವರು ಠರಾವನ್ನು ವಿರೋಧಿಸಿದರು.

ಮೆ. ಕೆ. ಸಿ. ಕರುಂಬಯ್ಯನವರು ಉತ್ತರವಿತ್ತರು.

ಫೈನಾನ್ಸು ಮೆಂಬರು ಇಂಡಿಯೂ ಸರ್ಕಾರವು ಈ ಹಣವನ್ನು ಕೊಡಲಿಕ್ಕಿಲ್ಲವೆಂಬದಾಗಿ ಪುನಃ ಮಾತಾಡಿದ ನಂತರ ಠರಾವನ್ನು ಓಟಿಗೆ ಹಾಕಲಾಗಿ ಕಾಂಗ್ರೆಸ್ ಮುಂಬರರು ಮತ್ತು ಲಾಯ್ಡರು ಮೆಂಬರುಗಳು ಪರವಾಗಿಯೂ, ಸರಕಾರ ಮೆಂಬರರು, ಯಂ. ಯಂ. ಬೆಳ್ಯಪ್ಪನವರು ಮತ್ತು ಚೌಡ್ಲು ಕಾಳಪ್ಪನವರು ವಿರೋಧವಾಗಿಯೂ ಓಟು ಮಾಡಿದರು. ಠರಾವು ಪಾಸಾಯಿತು.

22. 'ಪೊನ್ನಂಪೇಟೆನಾಡಿನ ಬೆಸಗೂರು, ಕೊಟ್ಟಗೇರಿ, ನಿಟ್ಟೂರು, ಬಾಳೆಲೆ, ಬಿಳೂರು ಮತ್ತು ದೇವನೂರು ಗ್ರಾಮಗಳಲ್ಲಿ ಮಳೆಯ ಅಭಾವದಿಂದ ಬೆಳೆಸರಿಯಾಗಿ ಆಗದ್ದರಿಂದ ಅಲ್ಲಿಗೆ ನೀರಿನ ಸರಬರಾಯಿ ಮಾಡಿಸುವ ಬಗ್ಗೆ ರೂ. 15,000 ವನ್ನು ವಡನೆ ಖರ್ಚು ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಕೆ. ಸಿ. ಕರುಂಬಯ್ಯನವರು ಸಭೆಯ ಮುಂದಿಟ್ಟು, ಕಳೆದ ನಾಲ್ಕು ವರ್ಷಗಳಿಂದಲೂ ಈ ಗ್ರಾಮಗಳ ಬೆಳೆಯು ಕೆಟ್ಟುಹೋದದ್ದರಿಂದಲೂ, ದಿನೇ ದಿನೇ ಅಲ್ಲಿಯ ರೈತರ ಸ್ಥಿತಿಯು ಹೀನಾವಸ್ಥೆಗೆ ಬರುತ್ತಿರುವುದರಿಂದಲೂ, ಅಲ್ಲಿ ನೀರಿನ ಯೋಜನೆಯು ಅತ್ಯಗತ್ಯವೆಂದೂ, ನಾಲ್ಕೈದು ವರ್ಷಗಳಿಂದ ಅಲ್ಲಿ ಬೆಳೆ ಬೆಳೆಯದ್ದರಿಂದ ಕಂದಾಯವ ಕೆಲವು ಭಾಗ ಮಾಫಿ ಬಿಡಬೇಕಾಯಿತೆಂತಲೂ, ನೀರಿಗೆ ಅನುಕೂಲತೆ ಮಾಡಿದರೆ ಸರ್ಕಾರವು ಕಂದಾಯ ಮಾಫಿ ಬಿಡುವ ಅಗತ್ಯವಿಲ್ಲವೆಂದೂ ಹೇಳಿದರು.

ಮೆ. ಎಚ್. ಬಿ. ಸಿದ್ದಯ್ಯನವರು ಅನುಮೋದಿಸಿದರು.

ಫೈನಾನ್ಸು ಮೆಂಬರರು-ಕೊಡಗಿನಲ್ಲಿ ನೀರಿನ ಯೋಜನೆಗಾಗಿ 4900 ಬಡ್ಜೆಟಿನಲ್ಲಿಡಲಾಗಿದೆ. ಗ್ರಾಮೋಭಿವೃದ್ಧಿ ಫಂಡಿನಿಂದ ಇದಕ್ಕೆ ಹಣ ಸಹಾಯ ಕೊಡಬಹುದು ಆದರೆ ಗ್ರಾಮಸ್ಥರು ಅವರ ಮೂರರಲ್ಲಿ ಒಂದು ಭಾಗ ಚಂದಾವೆತ್ತಿ ಶೇಖರಿಸಬೇಕಾಗುತ್ತೆ ಎಂದು ಹೇಳಿದರು.

ಓಟಿಗೆ ಹಾಕಲು, ಪರವಾಗಿ ಎಲ್ಲಾ ಚುನಾಯಿತ ದೇಶೀಯ ಮೆಂಬರುಗಳು ಓಟು ಮಾಡಿದರು. ಠರಾವು ಪಾಸಾಯಿತು.

22. 'ಪರೆ ಆಳೆಯುವಾಗ 1½ ಇಂಚಿನ ಚಚ್ಚೌಕ ಮರವ ದೊಣ್ಣೆಯನ್ನು ಉಪಯೋಗಿಸುವಂತೆ ಖರ್ಡಿಸಲು ಈ ಕೌನ್ಸಿಲು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಎಚ್. ಬಿ. ಸಿದ್ದಯ್ಯನವರು ಸೂಚಿಸಿ, ವ್ಯಾಪಾರಸ್ಥರು ಈಗಿರುವ ಊರುಟು ಕೋಲಿನಿಂದ ಆಳೆಯುವಾಗ ಕೋಲನ್ನು ಉರುಳಿಸಿ ಪರೆಯಲ್ಲಿ ಹೆಚ್ಚು ಬತ್ತ ಹಿಡಿಯುವಂತೆ ಮಾಡಿ ರೈತರಿಗೆ ತೊಂದರೆ ಕೊಡುವರೆಂದೂ, ಚಚ್ಚೌಕ ಕೋಲಾದರೆ ಉರುಳಿಸಲು ದುಸ್ಸಾಧ್ಯವಾದ್ದರಿಂದ ಈ ನಷ್ಟ ರೈತರಿಗಾಗಲಾರದೆಂದೂ, ಇದರಿಂದ ಸರಕಾರವು ರೈತರ ಹಿತವನ್ನು ಸಾಧಿಸಿದಂತಾಗುವದೆಂದೂ ಮಾತಾಡಿದರು.

ಮೆ. ಅಜ್ಜಮಾಡ ಮಾಪಪ್ಪನವರು ಅನುಮೋದಿಸಿದರು.

ಫೈನಾನ್ಸು ಮೆಂಬರರು ಸೂಚಕರು ಹೇಳಿದ ರೈತರ ತೊಂದರೆಗಳನ್ನು ನಾನು ಒಪ್ಪುತ್ತೇನೆಂದೂ ಈ ವಿಚಾರ ಆಲೋಚಿಸಲಾಗುವುದೆಂದೂ ಹೇಳಿದರು.

ಠರಾವನ್ನು ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇಶೀಯ ಮೆಂಬರುರು, ಅಬ್ದುಲ್ ರಹಮಾನ್ ಖಾನರೂ ಪರವಾಗಿ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

23. 'ಕೊಡಗಿನ ಬಸ್ ಚಾರ್ಜಿನ ಮಹಾ ಪರಿಮಾಣ ಮತ್ತು ಕನಿಷ್ಟ ಪರಿಮಾಣಗಳ ದರವನ್ನು ಮೈಲಿಗೆ 1 ಆಣೆ ಮತ್ತು ಮೂರು ಪೈಗಳಂತೆ ನಿಶ್ಚಯಿಸಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಎಚ್. ಬಿ. ಸಿದ್ದಯ್ಯನವರು ಮಂಡಿಸಿ, ಬಸ್ ಚಾರ್ಜಿನ ಕನಿಷ್ಟ ಪರಿಮಾಣವನ್ನು ನಿಶ್ಚಯಿಸದ ವಿನಹ ಸ್ವತಂತ್ರವಾಗಿರುವ ದೇಶೀಯ ಚಿಕ್ಕ ಚಿಕ್ಕ ಬಸ್ ಸರ್ವಿಸುಗಳು ದೊಡ್ಡ ಸರ್ವಿಸುಗಳೊಡನೆ ಪೈಪೋಟಿ ನಡೆಸಲಾರದೆ ಮಾಯವಾಗುವವೆಂದೂ, ದೊಡ್ಡ ಸರ್ವಿಸುಗಳು ಒಂದು ಲೈನಿನಲ್ಲಿ ಪೈಪೋಟಿ ನಡೆಸಿ ಮತ್ತೊಂದರಲ್ಲಿ ಲಾಭ ಪಡೆಯುವವೆಂದೂ, ಹೀಗೆ ಸಣ್ಣ ಸರ್ವಿಸುಗಳನ್ನು ನುಂಗಿ ಪುನಃ ಲೈನಿನಲ್ಲಿ ಯಥಾ ಪ್ರಕಾರ ದರವನ್ನು ಹೆಚ್ಚಿಸಿ ಜನರನ್ನು ಕಷ್ಟಕ್ಕೀಡುಮಾಡುವ ಸಂಭವವಿದೆಯೆಂದೂ, ಕನಿಷ್ಟ ದರವನ್ನು ನಿಶ್ಚಯಿಸಿದರೆ ಚಿಕ್ಕ ಸರ್ವಿಸುಗಳು ಜೀವಿಸಲು ಅನುಕೂಲವಾಗುವದೆಂದೂ ಮಾತಾಡಿದರು.

ಮೆ. ಅಜ್ಜಮಾಡ ಮಾದಪ್ಪನವರು ಅನುಮೋದಿಸಿದರು.

ಫೈನಾನ್ಸು ಮೆಂಬರು ಈ ಪ್ರಶ್ನೆಯು ಕೆಲವು ಸಮಯದ ಹಿಂದೆ ಆಲೋಚಿಸಲ್ಪಟ್ಟು ಮಹಾ ಪರಿಮಾಣದ ದರವನ್ನು ನಿ

ಶ್ಚೈಸಲಾಗಿದೆ. ಆ ಸಮಯದಲ್ಲಿ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮೋಟಾರು ವಾಹನಗಳ ಆಕ್ಟನ್ನು ತಿದ್ದುಪಡಿ ಮಾಡುವ ಠರಾವಿದ್ದದರಿಂದ ಕನಿಷ್ಟ ಪರಿಮಾಣವನ್ನು ನಿಶ್ಚಿಸಲಿಲ್ಲ. ಈ ವಿಚಾರ ಆಲೋಚಿಸಲಾಗುವದೆಂದರು.

ಓಟಿಗೆ ಹಾಕಲಾಗಿ ಎಲ್ಲಾ ಕಾಂಗ್ರೆಸ್ ಮೆಂಬರರು ಪರವಾಗಿ ಓಟು ಮಾಡಿದ್ದರಿಂದ ಠರಾವು ಮಂಜೂರಾಯಿತು. ಬಾಕಿ ಯಾರೂ ಓಟು ಮಾಡಲಿಲ್ಲ.

23. 'ಪೆರಾಜೆ ಮತ್ತು ಜೆಂಬು ಗ್ರಾಮಗಳ್ಳ ರೈತರು ಪೈಸಾರಿ ಜಾಗದಲ್ಲಿ ಏಕರಿಗೆ 8 ಆಣೆ ಕಂದಾಯದ ಮೇರೆ ಹತ್ತು ಏಕರೆಗಳ ವರೆಗೆ ಕರಿ ಫಸಲು ಮಾಡುವಂತೆ ಅನುಮತಿ ಕೊಡಬಹುದಾಗಿ ಈಸ ಭೆಯು ಚೀಫ್ ಕಮಿಷನರಿಗೆ ಶಿಪಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಎನ್. ಸೋಮಣ್ಣನವರು ಸೂಚಿಸಿ ಹೊದಲು ಈ ಸ್ಥಳಗಳಲ್ಲಿ ಜೀರಿಗೆ ಬೆಳೆಸಲು ಬಿಡುತ್ತಿದ್ದರು. ಆದರೆ ಇತ್ತಲಾಗಿ ಅದು ನಿಲ್ಲಿಸಲ್ಪಟ್ಟಿತು. ಮರಗಳನ್ನು ತೆಗೆಯುವದರಿಂದ ಮಳೆ ಕಡಿಮೆಯಾಗುವದೆಂದು ಹೇಳುತ್ತಾರೆ. ಆದರೆ ಈ ವರ್ಷ ಹೆಚ್ಚು ಮಳೆಯಾಗಿದೆ. ಅಲ್ಲಿಯ ರೈತರಿಗೆ ಯಾವದಾದರೊಂದು ವಿಧವ ಸಹಾಯಕ ವ್ಯವಸಾಯ ಸವಲತ್ತನ್ನು ಕೊಡದಿದ್ದರೆ ಅವರ ಸ್ಥಿತಿಯು ಶೋಚನೀಯವಾದೀತು ಎಂದರು.

ಮೆ. ಕೆ. ಪಿ. ಕರುಂಬಯ್ಯನವರು ಅನುಮೋದಿಸಿದರು.

ಫೈನಾನ್ಸು ಮೆಂಬರು, ಈ ವ್ಯವಸಾಯ ಮಾಡಲು ಮರಗಳನ್ನು ತೆಗೆಯಬೇಕಾದ್ದರಿಂದ ಭೂಮಿಯು ಬಂಜರು ಬೀಳಬಹುದಲ್ಲದೆ ಮಳೆಯು ಖಂಡಿತಾ ಕಮ್ಮಿಯಾಗುತ್ತದೆ. ಮರಕಾಡುಗಳಿಲ್ಲದ ಭಾಗಗಳನ್ನು ವ್ಯವಸಾಯಕ್ಕೆ ಕೊಡಬಹುದು. ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆಂದರು.

ಫಾರೆಸ್ಟು ಮೆಂಬರರು ಈ ವ್ಯವಸಾಯಕ್ಕಾಗಿ ಕಾಡುಗಳನ್ನು ತೆಗೆದರೆ ದೀರ್ಘದ ಆರ್ಥಿಕ ಶಾಖೆಗೇ ಪೆಟ್ಟು ಬಗಲಿಬಂತೆ-ಎಂದು ಹೇಳಿ ಠರಾವನ್ನು ವಿರೋಧಿಸಿದರು.

ಸೂಚಕರು ರಬ್ಬರು ವ್ಯವಸಾಯಕ್ಕಾಗಿ ಅನೇಕ ಏಕರುಗಳು ಧನಿಕರಿಗೆ ಕೊಡಲ್ಪಡುತ್ತಿವೆ. ಆವರೆ ಬಡ ರೈತರಿಗೆ ಯಾವ ಸಲಕರಣೆಯನ್ನೂ ಕೊಟ್ಟಲ್ಲವೆಂದರು.

ಡಿ. ಮೇಜಿಸ್ಟ್ರೇಟರು ಕಾಡನ್ನು ತೆಗೆಯುವದರಿಂದ ಭೂಮಿಯು ಬಂಜರು ಬೀಳುವದರಿಂದ ಠರಾವನ್ನು' ವಿರೋಧಿಸುತ್ತೇನೆಂದರು.

ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇಶೀಯರು ಪರವಾಗಿ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

24. 'ಕೋವಿ ಲೈಸೆನ್ಸು ಕೊಡಲು ತಮ್ಮ ಜಾಗದಲ್ಲಿರುವ ಲಂತಾನ ತೆಗೆದಿರಬೇಕೆಂಬ ಶರತ್ತನ್ನು ಹಾಕದೆ, ಗುಂಡು ಹೊಡೆದ ವಿಚಾರ ಕ್ರಿಮನಲ್ ತಕ್ಸೀರಿಗೆ ಒಳಗಾಗದ ಪ್ರಯೋಜ್ಯ ಸಾಗು ಅರ್ಜಿದಾರನಿಗೂ ಲೈಸೆನ್ಸು ಕೊಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಪಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಎನ್. ಸೋಮಣ್ಣನವರು ಸೂಚಿಸಿ, ತಮ್ಮ ಮತ್ತು ದವಸ ಧಾನ್ಯಗಳರಕ್ಷಣೆ ಬಗ್ಗೆ ಕೋವಿ ಎಲ್ಲರಿಗೂ ಅವಶ್ಯವೆಂದೂ, ಜಮ್ಮ ಮತ್ತು ಸಾಗೆಂಬ ಈ ಭೇಧ ಭಾವದಿಂದ ಸಾಗು ರೈತರಿಗೆ ತೊಂದರೆಯಾಗಿದೆಯೆಂದೂ, ಲೈಸೆನ್ಸು ಕೊಡಲು ಲಂತಾನ ತೆಗೆಯಬೇಕೆಂಬ ಶರತ್ತು ಹಾಕ ಕೂಡದೆಂದೂ ಹೇಳಿದರು.

ಮೆ. ಎಸ್. ರಾಮಮೂರ್ತಿಯವರು ಅನುಮೋದಿಸಿದರು.

ಡಿ. ಮೇಜಿಸ್ಟ್ರೇಟರು-ಈ ವರೆಗೆ ಲೈಸೆನ್ಸುಗಳನ್ನು ಧಾರಾಳವಾಗಿ ಕೊಡಲಾಗಿದೆಯೆಂದೂ, 1925 ರ ವರೆಗೆ ಬರೇ ತತ್ಕಾಲಿಕ ಲೈಸೆನ್ಸ್ಗಳಿತ್ತೆಂದೂ, ಅಂದರೆ ಆ ನಿಶ್ಚಿತ ಸಮಯ ಮುಗಿದ ನಂತರ ಕೊವಿಯನ್ನು ಪುನಃ ವಾಪ್ಸು ಕೊಡಬೇಕಿತ್ತೆಂತಲೂ, ಈಗ ಲೈಸೆನ್ಸು ಖಾಯಂ ಮಾಡಿರುತ್ತಾರೆಂತಲೂ, ಲಂತಾನ ತೆಗೆಯಬೇಕೆಂಬ ಶರತ್ತಿರುವುದು ಬಹು ಪ್ರಯೋಜನಕಾರಿಯೆಂತಲೂ, ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆಂತಲೂ ಹೇಳಿದರು.

ಮೆ. ಸೋಮಣ್ಣನವರು ಸಂಯುಕ್ತ ಪ್ರಾಂತದ ಕಾಂಗ್ರೆಸ್ ಸರಕಾರವು ಮುಫತ್ತು ಲೈಸೆನ್ಸು ಕೊಡುತ್ತಿದೆಯೆಂದೂ, ಆದ್ದರಿಂದ ಇಲ್ಲಿ ಶರತ್ತುಗಳನ್ನು ತೆಗೆದುಹಾಕುವದೊಳ್ಳೆದೆಂದೂ ಹೇಳಿದರು.

ಡಿ. ಮೇಜಿಸ್ಟ್ರೇಟರು-ಸಂಯುಕ್ತ ಪ್ರಾಂತದಲ್ಲಿ ಆಂಥಾ ಸವಲತ್ತಿರುವದು ಸರ್ಕಾರದ ಗೋಚರಕ್ಕೆ ಬಂದಿಲ್ಲವೆಂದೂ, ನ್ಯಾಯಬಾಹಿರರಾದವರಿಗೆ ಲೈಸೆನ್ಸು ಕೊಡುವದು ಹಿತವಲ್ಲವೆಂದೂ ಹೇಳಿದರು.

ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇಶೀಯ ಮೆಂಬರುಗಳೂ, ಅಬ್ದುಲ್ ರಹಮಾನ್ ಖಾನರು ಪರವಾಗಿ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

25. 'ಸಿವಿಲ್ ಕೋರ್ಟ್ನವರು ಜಪ್ತಿ ಮಾಡಿದ ಚರಸೊತ್ತನ್ನು ಸರ್ಕಾರದವರು ಕಂದಾಯ ಯಾ ಠಕಾವಿ ಸಾಲಗೈರೆಗಳ ಬಾಕಿಗಾಗಿ ರೆವಿನ್ಯೂ ಅಧಿಕಾರಿಗಳಿಂದ ಪುನಹ ಜಪ್ತಿ ಮಾಡಿಸಬಾರದು' ಎಂಬ ಠರಾವನ್ನು ಮೆ. ಎನ್. ಸೋಮಣ್ಣನವರು ಸೂಚಿಸಿ, ಈಗ ಇರುವ ರೀತಿ ಮೇರೆ ಸರಕಾರದವರು ಪುನಹ ಜಪ್ತಿ ಮಾಡಿದರೆ ಡಿಕ್ರಿ ಪಡೆದವರನ್ನು ಸಾಲಗಾರರು ಮೋಸಮಾಡಲು ಅನುಕೂಲಮಾಡಿಕೊಟ್ಟಂತಾಗುತ್ತೆ. ಸರಕಾರದವರಿಗೆ ಸಲ್ಲತಕ್ಕ ಹಣದ ವಸೂಲಾತಿಗಾಗಿ ಎಲ್ಲಾ ಸ್ವತ್ತುಗಳ ಮೇಲೆ ಸರ್ಕಾರಕ್ಕೆ ಮೊದಲನೇ ಹಕ್ಕಿದ್ದರೂ ಕೂಡ ಸಿವಿಲ್ ಕೋರ್ಟಿಗೆ ಹಕ್ಕಿಲ್ಲದ ಬೇರೆ ಸ್ವತ್ತುಗಳಿಂದ ಸರ್ಕಾರದವರು ವಸೂಲು ಮಾಡಿಕೊಳ್ಳಬಹುದು. ಆದ್ದರಿಂದ ಈ ಠರಾವನ್ನು ಪಾಸು ಮಾಡುವದು ಅವಶ್ಯವಾಗಿದೆ.

ಮೆ. ಯಂ. ಯಂ. ಬೆಳ್ಯಪ್ಪನವರು ಅನುಮೋದಿಸಿದರು.

ಡಿ. ಮೇಜಿಸ್ಟ್ರೇಟರವರು-ಠರಾವನ್ನು ವಿರೋಧಿಸುತ್ತಾ ಸರ್ಕಾರದ ಬಾಕಿಯನ್ನು ವಸೂಲು ಮಾಡುವದು ಅಧಿಕಾರಿಗಳ ಆದ್ಯ ಕರ್ತವ್ಯ. ಜಪ್ತಿ ಮಾಡಿದ ಸೊತ್ತಿನಿಂದ ಸರ್ಕಾರದ ಬಾಕಿ ಕಳೆದು ಉಳಿಕೆಯಾದದ್ದನ್ನು ಡಿಕ್ರಿದಾರರಿಗೆ ಕೊಡಲಾಗುತ್ತೆ. ಆದುದರಿಂದ ಈಗಿರುವ ರೀತಿಯನ್ನು ಬದಲಾಯಿಸುವ ಅವಶ್ಯಕತೆ ಇಲ್ಲ.

ಮೆ. ಪಿ. ಐ. ಬೆಳ್ಯಪ್ಪನವರು-ಸಿವಿಲ್ ಕೋರ್ಟ್ನಿಂದ ಜಪ್ತಿಯೊದ ಚರಸೊತ್ತನ್ನು ಸರ್ಕಾರದವರು ತಮ್ಮ ಬಾಕಿಗಾಗಿ ಪುನಹ ಜಪ್ತಿ ಮಾಡಬಾರದೆಂದರೆ ರೈತನ ಸ್ಥಿರಾಸ್ತಿಗಳನ್ನು ಸರ್ಕಾರದವರು ತಮ್ಮ ಬಾಕಿಗಾಗಿ ಹರಾಜು ಮಾಡಬೇಕಾಗುತ್ತದೆ. ಇದರಿಂದ ಹಲವು ರೈತರು ತಮ್ಮ ಭೂಮಿಯನ್ನು ಕಳಕೊಳ್ಳಬೇಕಾಗುವುದು. ಆದ್ದರಿಂದ ಈಗಿರುವ ಪದ್ಧತಿಯನ್ನು ಬದಲಾಯಿಸುವದು ಯುಕ್ತವಲ್ಲವೆಂದು ಹೇಳಿ ಠರಾವನ್ನು ವಿರೋಧಿಸಿದರು.

ಮೆ. ಗಳಾದ ಕೆ. ಮಲ್ಲಪ್ಪನವರು, ಎಸ್. ರಾಮಮೂರ್ತಿಯವರು ಒತ್ತಾಸೆಯಾಗಿಯೂ ಮೆ. ಬಿ. ಯಂ. ಕಾರ್ಯಪ್ಪನವರು ವಿರೋಧವಾಗಿಯೂ ಮಾತಾಡಿದರು.

ಸೂಚಕರ ಮತ್ತು ಡಿ. ಮೇಜಿಸ್ಟ್ರೇಟರ ಜವಾಬಾದ ಮೇಲೆ ಠರಾವನ್ನು ಓಟಿಗೆ ಹಾಕಲಾಗಿ ಮೂರು ಲಾಯರು ಮೆಂಬರುಗಳು ಮತ್ತು ಯಂ. ಯಂ. ಬೆಳ್ಯಪ್ಪನವರು ಪರವಾಗಿಯೂ, ಇಬ್ಬರು ಯೂರೋಪಿಯನ್ ಪ್ಲಾಂಟರ್ ಮೆಂಬರುಗಳಲ್ಲದೆ ಬಾಕಿಯವರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

26. 'ಕೊಡಗಿನ ಶಾಲೆಗಳಲ್ಲಿ ಒಂದನೇ ಫಾರಂನಿಂದ ಮೂರನೇ ಫಾರಮಿನ ವರೆಗೆ ಹಿಂದೀ ಭಾಷೆಯನ್ನು ಖಡ್ಡಾಯವಾಗಿ ಕಲಿಸಬೇಕೆಂದು ಈ ಸಭೆಯು ಶಿಪಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಕೆ. ಯಂ. ದೇವಯ್ಯನವರು ಸಭೆಯ ಮುಂದಿಟ್ಟು ಹಿಂದಿಯು ಹಿಂದುಸ್ಥಾನದ ಏಕ ಭಾಷೆಯಾಗಲಿಕ್ಕಿದೆ. ಭಾರತೀಯರಿಗೆ ರಾಷ್ಟ್ರಭಾಷೆಯ ಅವಶ್ಯಕತೆಯು ತುಂಬಾ ಇದೆ. ಏಕ ಭಾಷೆಯಿಂದ ಭಾರತೀಯರ ಬಗ್ಗಟ್ಟಿಗೆ ಸಹಾಯವಾಗುತ್ತದೆ. ಬೇರೆ ಎಲ್ಲಾ ಪ್ರಾಂತಗಳಲ್ಲಿಯೂ ಹಿಂದಿಯು ಖಡ್ಡಾಯವಾಗಿ ಕಲಿಸಲ್ಪಡುತ್ತಿರುವದರಿಂದ ಇಲ್ಲಿಯೂ ಕಲಿಸಲ್ಪಡಬೇಕೆಂದು ಮುಂತಾಗಿ ಹೇಳಿದರು.

ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದರು.

ಶಾಲಾ ಇನ್ಸ್ಪೆಕ್ಟರವರು-ದೇಶದವರ ಒಗ್ಗಟ್ಟಾದ ಅಭಿಪ್ರಾಯವಿಲ್ಲ. ಇದನ್ನು ಹಣದ ಅಭಾವದಿಂದ ಈಗ ಸಾಧಿಸಲು ಸಾಧ್ಯವಿಲ್ಲ. ಎಂದು ಹೇಳಿ ವಿರೋಧಿಸಿದರು.

ಮೆ. ಪಿ. ಐ. ಬೆಳ್ಯಪ್ಪನವರು ಠರಾವಿಗೆ ಒತ್ತಾಸೆಯಾಗಿಯೂ, ಮೆ. ಅಬ್ದುಲ್ ರಹಮಾನ್ ಖಾನರವರು ವಿರೋಧವಾಗಿಯೂ ಮಾತಾಡಿದರು.

ಠರಾವನ್ನು ಓಟಿಗೆ ಹಾಕಲಾಗಿ ಎಲ್ಲಾ ಕಾಂಗ್ರೆಸು ಮೆಂಬರುಗಳು ಮತ್ತು ಮೂರು ಲಾಯರು ಮೆಂಬರುಗಳು ಪರವಾಗಿ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

27: 'ಸಿಬ್ಬಂದಿ ಶೋತೆಯ ಯೋಜನೆಯಲ್ಲಿ ಯಾವ ನಾಡು ಖಜೇರಿಯನ್ನೂ ತೆಗೆಯಬಾರದು' ಎಂಬ ಠರಾವನ್ನು ಮೆ. ಪಿ. ಐ. ಬೆಳ್ಯಪ್ಪನವರು ಸೂಚಿಸಿ ಹೀಗೆಂದರು-ಸರಕಾರ ಆಫೀಸುಗಳ ಪೈಕಿ ರೈತನಿಗೆ ಅತ್ಯವಶ್ಯವಾವನ್ನು ನಾಡು ಖಜೇರಿಯ ತೆ. ತಿಲ್ಲಿಗೆ ರೈತರು ಆಗಾಗ ಹೋಗಬೇಕಾಗುವುದು. ಆದಕಾರಣ ನಾಡು ಖಜೇರಿಯನ್ನು ತೆಗೆದರೆ ರೈತರಿಗೆ ತುಂಬಾ ನಷ್ಟ ಕಷ್ಟ ಉಂಟಾಗುತ್ತದೆ. ರೈತರ ಕಷ್ಟ ಸುಖಗಳನ್ನೆರಿಯುವಂಥ ಉದ್ಯೋಗಸ್ಥರೇ ನಾಡು ಖಜೇರಿಯವರು ಆದ್ದರಿಂದ ನಾಡು ಖಜೇರಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದರ ಬದಲು ಪಾರುಪತ್ಯಗಾರರ ಸಂಬಳ ಕಡಿಮೆ ಮಾಡಿ ಮೊದಲಿದ್ದಂತೆ ನಾಡು ಖಜೇರಿಗಳನ್ನು ಹೆಚ್ಚಿಸುವುದು ಉತ್ತಮ.

ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದರು.

ಫೈನಾನ್ಸು ಮೆಂಬರು-ಹಣದ ಅಭಾವದಿಂದ ಎರಡು ನಾಡು ಖಜೇರಿಗಳನ್ನು ತೆಗೆಯಲೇ ಬೇಕಾಗಿದೆ. ಇದರಿಂದ, ಕೆಲವು ಜನರಿಗೆ ಸ್ವಲ್ಪ ತೊಂದರೆಯಾಗಬಹುದು. ಆದರೆ ಅದನ್ನು ಆದಿಷ್ಟು ಕಡಿಮೆ ಮಾಡಲು ತಕ್ಕ ಏರ್ಪಾಡು ಮಾಡಲಾಗುವುದು. ಹೇಗೂ ಠರಾವನ್ನು ವಿರೋಧಿಸಬೇಕಾಗಿದೆ.

ಠರಾವನ್ನು ಓಟಿಗೆ ಹಾಕಲಾಗಿ ಚುನಾಯಿತ ದೇಶೀಯ ಮೆಂಬರುಗಳೆಲ್ಲರೂ ಪರವಾಗಿ ಓಟು ಮಾಡಿದ್ದರಿಂದ ಠರಾವು ಮಂಜೂರಾಯಿತು.

28. 'ಫ್ರೇಜರ್ಪೇಟೆ ಹೋಬಳಿ ಖಜೇರಿಯನ್ನು ತೆಗೆಯಕೂಡದೆಂಬ ಠರಾವನ್ನು ಮೆ. ಮಲ್ಲಪ್ಪನವರು ಸೂಚಿಸಿ ಹೀಗೆಂದರು-ಫ್ರೇಜರ್ಪೇಟೆ ಹೋಬಳಿಯ ಸ್ಥಿತಿಯು ಕೊಡಗಿನ ಇತರ ನಾಡುಗಳ ಸ್ಥಿತಿಗಿಂತ ವಿಶ್ಲೇಷತರಹದ್ದಾಗಿದೆ. ಅಲ್ಲಿ ಎರಡು ನೋಟಿಫೈಡ್ ಏರಿಯಾಗಳೂ, ಕೊಡಗಿನ ಅತಿ ದೊಡ್ಡ ಗ್ರಾಮವೂ ಇವೆ. ಈ ಹೋಬಳಿ ಖಜೇರಿಯನ್ನು ಪಜಾಮಾಡಿದ್ದಾದರೆ ಅಲ್ಲಿಯ ಹೆಚ್ಚಾಗಿರುವ ವಕ್ಕಲಿಗರಿಗೆ ಡಿ. ಜೋರ್ಡು ಮೆಂಬರುತನದ ಸೌಲಭ್ಯವು ತಪ್ಪಿ ಹೋಗುತ್ತದೆ. ಇದು ಬಹಳ ಹಿಂದು ಬಿದ್ದ ಹೋಬಳಿಯಾಗಿದೆ. ನಾಡು ಖಜೇರಿ ತೆಗೆಯಲ್ಪಟ್ಟರೆ ಇಲ್ಲಿಯವರು ಮತ್ತಷ್ಟು ಹಿಂದೆ ಬೀಳುವರು.

ಮೆ. ಎನ್. ಸೋಮಣ್ಣನವರು ಅನುಮೋದಿಸಿದರು.

ಫೈನಾನ್ಸು ಮೆಂಬರು-ಸಿಬ್ಬಂದಿಯೋತೆಗಾಗಿ ಹೇಗೂ ಎರಡು ನಾಡುಖಜೇರಿಗಳನ್ನು ತೆಗೆಯಬೇಕಾಗಿದೆ. ಆಷ್ಟರೆ ಯಾವ ನಾಡುಖಜೇರಿಗಳನ್ನು ತೆಗೆಯುವದೆಂದು ನಿಶ್ಚಯವಾಗಿರುವುದಿಲ್ಲ. ನಿಶ್ಚಯಿಸುವಾಗ ಸೂಚಕರು ಹೇಳಿದ ವಿಷಯಕ್ಕೆ ಗಮನ ಕೊಡಲಾಗುವುದು.

ಮೆ. ಚೌಡ್ಲು ಕಾಳಪ್ಪನವರು-ಅಮ್ಮತ್ತಿ ಮತ್ತು ಸಂಟಿಕೊಪ್ಪ ನಾಡು ಕಜೇರಿಗಳನ್ನು ತೆಗೆಯಬೇಕಲ್ಲದೆ ಫ್ರೇಜರ್ಪೇಟೆಯ ಕೆಚ್ಚೇರಿಯನ್ನೆಂದಿಗೂ ತೆಗೆಯಬಾರದೆಂದರು.

ಮೆ. ಸಿದ್ದಯ್ಯನವರು-ಸರ್ಕಾರದವರು ಈ ವಿಚಾರ ಇನ್ನೂ ಆಲೋಚನೆಯಲ್ಲಿರುವಾಗ್ಯೆ ಅಮ್ಮತ್ತಿಯನ್ನೇ ತೆಗೆಯಬೇಕೆಂದು ಒಬ್ಬ ಮೆಂಬರರು ಹೇಳುವದು ಯುಕ್ತವಲ್ಲವೆಂದರು.

(8 ನೇ ಪುಟಕ್ಕೆ ಸಾಗಿದೆ.)

ಕೊಡಗು

ನವಂಬರ್ ತಾರೀಕು ೧೧ನೇ ಶುಕ್ರವಾರ ೧೯೩೮.

ಸ್ಕೂಲ್ ಫೀಜು ಏರಿಸುವಿಕೆ.

ಕೊಡಗಿನ ಸರ್ಕಾರಿ ಹೈಸ್ಕೂಲುಗಳಲ್ಲಿ IV ಫಾರಂನಿಂದ VI ಫಾರಮಿನ ವರೆಗೆ ಇಷ್ಟರ ವರೆಗಿದ್ದ ರೂ. 22 ವಾರ್ಷಿಕ ಸ್ಕೂಲ್ ಫೀಜನ್ನು 1939 ನೇ ಏಪ್ರಿಲ್ ನಿಂದ ರೂ. 34/-ಕ್ಕೂ, I ಫಾರಂನಿಂದ III ಫಾರಮಿನ ವರೆಗೆ ರೂ. 18 ರಿಂದ 22 ಕ್ಕೂ, ಹೈಯರ್ ಎಲಿಮೆಂಟರಿ ಶಾಲೆಗಳ ಎಂಟನೇ ಸ್ಟೇಂಡಾರ್ಡಿಗೆ ರೂಪಾಯಿ 10ರವರೆಗೂ, ದಾಖಲಾತಿ ಫೀಜನ್ನು ಕೆಳ ಫಾರಮುಗಳಿಗೆ ರೂ. 1½ ಯಂತೆಯೂ, ಮೇಲಿನ ಫಾರಮುಗಳಿಗೆ ರೂ. 2 ರಂತೆಯೂ ಏರಿಸಲಾಗುವದೆಂದು ಈ ತಿಂಗಳ ಗಜೆಟಿನಲ್ಲಿ ಪ್ರಕಟವಾಗಿದೆ.

ಈ ರೀತಿ ಸ್ಕೂಲ್ ಫೀಜನ್ನು ಏಕಡ 50 ರಷ್ಟು ಏರಿಸಿದ್ದರಿಂದ ಕೊಡಗಿನ ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ಧಕ್ಕೆ ತಗಲುವದೆಂಬುದರಲ್ಲಿ ಏನೊಂದೂ ಸಂಶಯವಿಲ್ಲ. ಗ್ರಾಮದ ರೈತರ ಆರ್ಥಿಕ ಸ್ಥಿತಿಯು ದಿನೇ ದಿನೇ ಹೀನಾವಸ್ಥೆಗೆ ಬರುತ್ತಿದೆ. ಈ ದೆಸೆಯಿಂದಲೇ ರೈತರಿಗೆ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಬಿಡಲು ಹಲವು ತರದ ತೊಂದರೆಗಳುಂಟಾಗುತ್ತಿವೆ. ಎಷ್ಟೊ ಜನರು ಇದಕ್ಕಾಗಿ ಸಾಲಮಾಡಿ ಅದನ್ನು ಮರುಪಾವತಿ ಮಾಡಲಾರದೆ ಕಷ್ಟದಲ್ಲಿ ನರಳುತ್ತಿರುವರು. ಅದರೊಂದಿಗೆ ಸ್ಕೂಲ್ ಫೀಜನ್ನು ಹೆಚ್ಚು ಮಾಡುವದರಿಂದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬಾರದೆಂದು ಅಡ್ಡಿ ಮಾಡಿದಂತಾಗುವದು. ಕೊಡಗಿನಲ್ಲಿ ಇಷ್ಟರ ವರೆಗೆ ಸ್ಕೂಲ್ ಫೀಜು ಕಡಿಮೆಯಾಗಿರುವ ಮತ್ತು ಶಾಲೆಗಳು ಗ್ರಾಮಸ್ಥರಿಗೆ ಸವಿೂಪವಿರುವ ಅನುಕೂಲತೆಗಳಿಂದ ಈ ಪ್ರಾಂತ್ಯದಲ್ಲಿ ವಿದ್ಯಾಭ್ಯಾಸವು ಬೇರೆ ಕಡೆಗಳಿಗಿಂತ ಹೆಚ್ಚು ಮುಂದುವರಿದಿತ್ತು. ಈಗ ಸ್ಕೂಲ್ ಫೀಜನ್ನು ಬಡ ರೈತರು ಕೊಡಲಾರದಷ್ಟು ಏರಿಸಿರುವ ಕಾರಣ ಹಲವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ಬಾಕಿ ಮಾಡಬೇಕಾಗುವದೆಂಬುದರಲ್ಲಿ ಸಂಶಯವಿಲ್ಲ. ಇದರಿಂದ ಕೆಲವು ಕಡೆ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯು ಕಡಿಮೆಯಾಗಿ, ಅಲ್ಲಿಯ ಶಾಲೆಗಳ ಆವಶ್ಯಕತೆಯೇ ಇಲ್ಲದಂತಾಗುವ ಸಂದರ್ಭವು ಬೀಳಬಹುದು. ಇದರಿಂದ ಸ್ಕೂಲ್ ಫೀಜಿನಿಂದ ಸರಕಾರದವರಿಗೆ ದೊರೆಯುತ್ತಿರುವ ಉತ್ಪತ್ತಿಯು ಕಡಿಮೆಯಾಗುವದೆಂಬುದರಲ್ಲಿ ಅನುಮಾನವಿಲ್ಲ. ಹಣದ ಅಭಾವದ ಕಾರಣ ಸರಕಾರದವರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಸ್ಕೂಲ್ ಫೀಜನ್ನು ಏರಿಸುವ ಕಾರ್ಯವನ್ನು ಕೈಕೊಂಡಿದ್ದರೆ, ಅವರ ಉದ್ದಿಶ್ಯವು ನೆರವೇರುವಂತೆ ಕಂಡು ಬರುವದಿಲ್ಲ. ಮಾತ್ರವಲ್ಲ ಇದರಿಂದ ದೇಶದಲ್ಲಿ ವಿದ್ಯಾಭ್ಯಾಸವು ಅಭಿವೃದ್ಧಿಗೊಳ್ಳುವದರ ಬದಲು ಹಿಂದಕ್ಕೆ ತಳ್ಳಲ್ಪಟ್ಟಂತಾಗುವುದು. ಇದು ಜನರ ಹಿತವನ್ನು ಸಾಧಿಸಬೇಕೆಂದಿರುವ ಸರಕಾರದವರ ಧರ್ಮಕ್ಕೆ ಸಂಪೂರ್ಣ ವಿರೋಧವಾಗುವುದು.

ಸರ್ಕಾರದವರ ಆದಾಯ ವೆಚ್ಚವನ್ನು ಸರಿಪಡಿಸಲು ಅವರು ಈಗ ಕೈಕೊಂಡಿರುವ ಸಿಬ್ಬಂದಿ ಖೋತೆಯ ಜೊತೆಗೆ ಜನರ ಮೇಲೆ ಈ ರೀತಿಯ ಹೆಚ್ಚಿನ ತೆರಿಗೆಯನ್ನು ಹಾಕದೆ ಸಾಧ್ಯವಿಲ್ಲವೆಂದು ಅಧಿಕಾರಿಗಳು ವಾದಿಸಬಹುದು. ಆದರೆ ಕೊಡಗಿನ ಸರ್ಕಾರವು ತಲೆಭಾರದ ಸರ್ಕಾರವೆಂದು ಲೋಕವಿದಿತವಾದ ವಿಚಾರವಾಗಿದೆ. ಈ ಸರ್ಕಾರದ ಖರ್ಚನ್ನು ಖೋತೆ ಮಾಡಬೇಕಾದದ್ದು ಅವಶ್ಯ. ಅದನ್ನು ದೇಶದ ಜನರ ಪ್ರತಿನಿಧಿಗಳ ಸಲಹೆಯಂತೆ ಮಾಡಿದ್ದೇಯಾದರೆ ಈಗಿರುವ ದುಂದುಗಾರಿಕೆಯ ಖರ್ಚನ್ನು ಕಡಿಮೆ ಮಾಡಿ ಸಾಕಷ್ಟು ಉಳಿತಾಯ ಮಾಡಬಹುದಾಗಿದೆ. ಅದರ ಬದಲು ದೇಶದ ಜನರ ಅಭಿಪ್ರಾಯಕ್ಕೆ ಗಣನೆ ಕೊಡದೆ, ಬರೇ ಚಿಕ್ಕ ಉದ್ಯೋಗಳನ್ನು ಖೋತೆ ಮಾಡುವ ಯತ್ನದಲ್ಲಿ ಸರ್ಕಾರದವರು ಹೆಚ್ಚಿನ ಹಣವನ್ನು ಉಳಿತಾಯ ಮಾಡಲಾರದವರಾಗಿ ಜನರ ಮೇಲೆ ಸ್ಕೂಲ್ ಫೀಸ್ ಹೆಚ್ಚಿಸುವಂತ ಹೊಸ ತೆರಿಗೆಯನ್ನು ಹಾಕುತ್ತಿರುವದು ಖಂಡನೀಯವಾಗಿದೆ.

ದೇಶದವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಯಾವುದೊಂದೂ ಪ್ರಯತ್ನ ಮಾಡದೆ ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕುವದು ಎಂದೂ ನ್ಯಾಯವಲ್ಲ.

ಇತರ ಕಡೆಗಳಲ್ಲಿ ಸ್ಕೂಲ್ ಫೀಸ್ ಇಲ್ಲಿಗಿಂತ ಹೆಚ್ಚಾಗಿದೆಯೆಂದು ಸರ್ಕಾರದವರು ಹೇಳಬಹುದು. ಆದರೆ ಕೊಡಗಿನ ಸ್ಥಿತಿಗತಿಗಳಿಗೂ ಹೊರಗಿನವುಗಳಿಗೂ ದೊಡ್ಡ ತಾರತಮ್ಯ ಇದೆ. ಮದ್ರಾಸು ಪ್ರಾಂತ್ಯದಲ್ಲಿ ಕೊಡಗಿಗಿಂತ ಹೆಚ್ಚಿನ ಸ್ಕೂಲ್ ಫೀಸ್ ಇದೆಯೆಂಬುವುದು ನಿಜ. ಈ ಕಾರಣದಿಂದಲೇ ಅಲ್ಲಿಯ ಐಶ್ವರ್ಯವಂತರೂ, ಪಟ್ಟಣಿಗರೂ ವಿದ್ಯಾಭ್ಯಾಸದಲ್ಲಿ ಮುಂದುವರಿತು ಗ್ರಾಮಸ್ಥರು ಹಿಂದುಬಿದ್ದಿರುವದಾಗಿದೆ. ಆವರೆ ಕೊಡಗಿನಲ್ಲಿ ಸ್ಕೂಲ್ ಫೀಸ್ ಕಡಿಮೆಯಾಗಿರುವುದರಿಂದಲೂ, ಗ್ರಾಮಾಂತರಗಳಲ್ಲಿ ಅಲ್ಲಲ್ಲಿ ಶಾಲೆಗಳು ಸ್ಥಾಪಿಸಲ್ಪಟ್ಟಿರುವುದರಿಂದಲೂ ಇಲ್ಲಿಯ ರೈತರು ಪಟ್ಟಣಿಗರಂತೆಯೇ ವಿದ್ಯಾಭ್ಯಾಸದಲ್ಲಿ ಮುಂದುವರಿಯಲು ಕಾರಣವಾಗಿದೆ. ಈ ತರದ ಅನುಕೂಲತೆಗಳು ಮುಂದಕ್ಕೂ ಇರಬೇಕೆಂದೇ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿ ಇಟ್ಟುಕೊಳ್ಳಬೇಕೆಂದು ಹಲವರು ಅಭಿಪ್ರಾಯಪಡುತ್ತಿರುವದಾಗಿದೆ. ಆದ್ದರಿಂದ ಮದ್ರಾಸು ಪ್ರಾಂತ್ಯದ ಸ್ಕೂಲ್ ಫೀಸಿನ ದರವನ್ನು ಹೋಲಿಸಿ ಇಲ್ಲಿಯದನ್ನು ಹೆಚ್ಚಿಸುವದರಲ್ಲಿ ಅರ್ಥವಿಲ್ಲ. ಇಲ್ಲಿಯ ಸರ್ಕಾರದವರು, ಕೊಡಗು ವಿದ್ಯಾಭ್ಯಾಸದಲ್ಲಿ ಮುಂದುವರಿದಿದೆಯೆಂಬ ಕೀರ್ತಿಯನ್ನು ಮುಂದಕ್ಕೂ ಕಾಪಾಡಬೇಕೆಂದಿದ್ದರೆ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ಹೆಚ್ಚಿಸುವ ಏರ್ಪಾಡನ್ನು ಮಾಡುವುದು ಯುಕ್ತವಲ್ಲ. ಯಾವ ಸರ್ಕಾರವೇ ಆಗಲಿ ದೇಶದ ಮುಂದಿನ ಜನಾಂಗದ ಅಭಿವೃದ್ಧಿಯ ದೃಷ್ಟಿಯಿಂದ ಅವರ ವಿದ್ಯಾಭಿವೃದ್ಧಿಗೆ ಹೆಚ್ಚಿಚ್ಚಿನ ಅನುಕೂಲತೆಗಳನ್ನು ಮಾಡಿಕೊಡುವದು ಅದರ ಕರ್ತವ್ಯವಾಗಿದೆ. ಅದರ ಬದಲು ವಿದ್ಯಾಭ್ಯಾಸಕ್ಕೆ ದೊಡ್ಡ ಅಡಚಣೆ ಆಗುವಂತಾ ಏರ್ಪಾಡನ್ನು ಇಲ್ಲಿಯ ಸರ್ಕಾರದವರು ಕೈಕೊಳ್ಳುವುದು ಶೋಚನೀಯವಾಗಿದೆ. ಇನ್ನಾದರೂ ಸಮ್ಮಂಧಪಟ್ಟ ಅಧಿಕಾರಿಗಳು ಚೆನ್ನಾಗಿ ಆಲೋಚಿಸಿ ಸ್ಕೂಲ್ ಫೀಸನ್ನು ಹೆಚ್ಚಿಸದೆ ಈಗಿರುವ ದರವನ್ನೇ ಇಡುವಂತೆ ನಿಶ್ಚಯಿಸುವರಾಗಿ ಆಶಿಸುತ್ತೇವೆ.

ಸಂಸ್ಕೃತಕ್ಕೂ ಖೋತೆಯೇ?

ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳಲ್ಲಿ ಇರುವ ಇಬ್ಬರು ಸಂಸ್ಕೃತ ಪಂಡಿತರುಗಳಲ್ಲಿ ಖೋತೆಯೇನಾದರೂ ಮಾಡಲ್ಪಡುವುದೋ ಎಂದು ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ಪ್ರಶ್ನೆ ಕೇಳಿದಕ್ಕೆ, ಈ ವಿಷಯವು ಆಲೋಚನೆ ಮಾಡಲ್ಪಡುತ್ತಿದೆಯೆಂದೂ, ಪುನಹ ಕೇಳಿದ ಮರು ಪ್ರಶ್ನೆಗಳಿಗೆ ಸಂಸ್ಕೃತ ಭಾಷೆಯು ಮೃತ ಭಾಷೆಯೆಂದೂ, ಊರ್ದು ಭಾಷೆಯು ಆಧುನಿಕ ಜೀವಿತ ಭಾಷೆಯೆಂದೂ ಮೊದಲಾಗಿ ವಿದ್ಯಾ ಇಲಾಖಾ ಮೆಂಬರರು ಕೊಟ್ಟ ಜವಾಬನ್ನು ಕುರಿತು ಕಳೆದ ವಾರ ಪ್ರಕಟವಾಗಿದ್ದ ಬಾತ್ಮಿಯನ್ನು ವಾಚಕ ಮಹಾಶಯರೂ, ಸರ್ಕಾರದ ಅಧಿಕಾರಿಗಳೂ ಓದಿರಬಹುದು. ಸಂಸ್ಕೃತ ಮತ್ತು ಊರ್ದು ಭಾಷೆಗಳನ್ನು ಕುರಿತು ಶಾಲಾ ಇನೆಸ್ಪೆಕ್ಟರವರು ಕೊಟ್ಟ ತಮ್ಮ ವಯಕ್ತಿಕ ಅಭಿಪ್ರಾಯವನ್ನು ಕುರಿತು ಕಳೆದ ವಾರದ ಬಾತ್ಮಿಯಲ್ಲಿ ಯಥೋಚಿತವಾಗಿ ಠೀಕಿಸಲ್ಪಟ್ಟಿತ್ತು. ಅದನ್ನು ಕುರಿತು ಪುನಹ ಇಲ್ಲಿ ಬರೆಯುವ ಆವಶ್ಯಕತೆ ಇಲ್ಲ. ಆದರೆ ಸಂಸ್ಕೃತ ಭಾಷೆಯನ್ನು ಇವೆರಡು ಹೈಸ್ಕೂಲುಗಳಲ್ಲಿ ಕಲಿಸಲು ಸುಮಾರು ಹದಮೂರು ವರ್ಷಗಳ ಹಿಂದೆ ಏರ್ಪಡಿಸಿದ್ದು ಜಾಗ್ರತಿಗೊಂಡ ಜನರ ಕೋರಿಕೆ ಮೇರೆ ಎಂಬುದನ್ನು ಸರ್ಕಾರದವರು ಮರೆಯಬಾರದು. ಜನರ ಇಂಥಾ ಕೋರಿಕೆಯು ಈಗ ಮತ್ತಷ್ಟು ಬಲವಾಗಿರುವುದಲ್ಲದೆ, ಅದರ ಶಕ್ತಿಯೇನೂ ಕುಂದಿರುವುದಲ್ಲ. ಮುಸಲ್ಮಾನರ ಸಂಸ್ಕೃತಿಯ ಅಭಿವೃದ್ಧಿಗೆ ಊರ್ದು ಭಾಷೆಯು ಎಷ್ಟು ಪ್ರಾಮುಖ್ಯವಾದದ್ದೋ ಅಷ್ಟೇ ಸಂಸ್ಕೃತ ಭಾಷೆಯು ಹಿಂದೂಗಳ ಸಂಸ್ಕೃತಿಯ ಬೆಳವಣಿಗೆಗೆ ಅವಶ್ಯವಾದದ್ದು. ಇವೆರಡು ಶಾಲೆಗಳಲ್ಲಿ ಊರ್ದು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ 35. ಮತ್ತು ಸಂಸ್ಕೃತ ವಿದ್ಯಾರ್ಥಿಗಳ ಸಂಖ್ಯೆ 153. ಸಂಸ್ಕೃತ ಕಲಿಯುವ ಮಕ್ಕಳ ಸಂಖ್ಯೆ ಹೆಚ್ಚಿದ್ದರೂ ಕೂಡ ಸಂಸ್ಕೃತ ಪಂಡಿತನೊಬ್ಬರನ್ನು ಮಾತ್ರ ಖೋತೆ ಮಾಡುವ ಆಲೋಚನೆ ಮೂಡುವುದು ಎಂದೂ ನ್ಯಾಯವಲ್ಲ. ಊರ್ದು ಪಂಡಿತರನ್ನು ತೆಗೆಯಬೇಕೆಂದು ನಮ್ಮ ಸೂಚನೆಯಲ್ಲ. ಎರಡು ಭಾಷೆಗಳನ್ನೂ ಹೈಸ್ಕೂಲು ವಿದ್ಯಾರ್ಥಿಗಳಿಗೆ ಕಲಿಸುವುದು ಅತ್ಯಗತ್ಯ. ಇವೆರಡು ಭಾಷೆಗಳಿಗೂ ಏಕ ರೀತಿಯ ಪ್ರಾಮುಖ್ಯತೆಯನ್ನು ಕೊಡಬೇಕು. ಒಂದು ಭಾಷೆಯ ಪಂಡಿತರನ್ನು ತೆಗೆದು, ಇನ್ನೊಂದರ ಪಂಡಿತರನ್ನು ಇಟ್ಟುಕೊಳ್ಳುವ ಅಧಿಕಾರಿಗಳ ಭೇಧ ಭಾವವು ಖಂಡನೀಯವಾಗಿದೆ. ಸರ್ಕಾರದವರ ಈ ತರಹದ ವರ್ತನೆಯು ಜನರಲ್ಲಿ ಕೋಮುವಾರು ವೈಶಮ್ಯವನ್ನು ಹುಟ್ಟಿಸಲು ಅವಕಾಶ ಮಾಡಿಕೊಡುವದೋ ಎಂಬ ಸಂಶಯಕ್ಕೆ ಆಸ್ಪದಕೊಡುತ್ತೆ. ಈ ತರಹದ ಖೋತೆಯಿಂದಲಾದರೋ ದೊಡ್ಡ ಉಳಿತಾಯವೇನೂ ಆಗುವಂತಿಲ್ಲ. ಮುಂದೆ ಬರುವ ಪಂಡಿತರುಗಳ ಸಂಬಳದ ದರವು ಕಡಿಮೆಯಾಗಿರುವುದರಿಂದ ಇದಕ್ಕಾಗಿ ಹೆಚ್ಚಿನ ವೆಚ್ಚವೇನೂ ಇಲ್ಲ. ದೊಡ್ಡ ದೊಡ್ಡ ಗಜಿಟೆಡ್ ಉದ್ಯೋಗಸ್ಥರುಗಳಿಗೆ ಸಾವಿರಗಟ್ಲೆ ರೂಪಾಯಿ ಸಂಬಳ ಮಾತ್ರವಲ್ಲ, ಹಲವು ತರದ ಎಲೋವೆನ್ಸ್‌ಗಳನ್ನು ಕೊಡಲು ದುಂದು ಖರ್ಚು ಮಾಡುವ ಸರ್ಕಾರದವರು ಹಿಂದೂ ಸಂಸ್ಕೃತಿಗೆ ಬಹು ಮುಖ್ಯವಾದ ಸಂಸ್ಕೃತ ಭಾಷೆಯನ್ನು ಕಲಿಸಲು ಬೇಕಾಗುವ ಅಲ್ಪ ಮೊಬಲಗನ್ನು ಕೊಡಲಾರೆವೆಂಬುದರಲ್ಲಿ ಅರ್ಥವಿಲ್ಲ. ಇದರಿಂದ ದೇಶದಲ್ಲಿ ತುಂಬಾ ಅತೃಪ್ತಿ ಉಂಟಾಗದಿರದು. ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿ, ಈ ವಿಚಾರದಲ್ಲಿ ಅಲ್ಪ ಮೊಬಲಗಿನ ಉಳಿತಾಯಕ್ಕಾಗಿ ಖೋತೆ ಮಾಡಿ ಜನರ ಮನಸ್ಸನ್ನು ನೋಯಿಸಲಿಕ್ಕಿಲ್ಲವಾಗಿ ನಂಬುತ್ತೇವೆ.

ಸಿಬ್ಬಂದಿ ಖೋತೆ.

ಕೊಡಗಿನ ಸರ್ಕಾರದವರು ಕೈಕೊಂಡಿರುವ ಸಿಬ್ಬಂದಿ ಖೋತೆಯ ರೀತಿಯನ್ನು ಕುರಿತು ಕೌನ್ಸಿಲಿನ ಒಳಗೂ, ಹೊರಗೂ ಬೇಕಾದಷ್ಟು ಠೀಕೆಗಳು ಮಾಡಲ್ಪಟ್ಟಿವೆ. ಚೀಫ್ ಕಮಿಷನರವರು ಕೌನ್ಸಿಲಿನಲ್ಲಿಯೂ, ಡೆಪ್ಯುಟೇಶನಿನವರಿಗೂ ಹೇಳಿದ ಮಾತುಗಳಿಂದ 30 ವರ್ಷಕ್ಕಿಂತ ಹೆಚ್ಚು ಸರ್ವಿಸ್ಸಾಗಿ ಪೂರ್ತಿ ಪೆನ್ಶನ್ ಗಳಿಸಿರುವವರನ್ನು ಮೊದಲಾಗಿಯೂ, ಇದು ಸಾಲದಿದ್ದರೆ 25 ವರ್ಷಕ್ಕಿಂತ ಹೆಚ್ಚು ಸರ್ವಿಸಾದವರನ್ನೂ, ಉದ್ಯೋಗದಿಂದ ಬಿಡುಗಡೆ ಮಾಡಲಾಗುವದೆಂದೂ, ಕಮ್ಮಿ ಸರ್ವಿಸಿನವರನ್ನು ಎಂದಿಗೂ ತೆಗೆಯುವುದಿಲ್ಲವೆಂದೂ ಅರ್ಥವಾಗಿತ್ತು. ಈ ವಿಧಾನವನ್ನು ಸರ್ಕಾರದವರು ಕೈಕೊಂಡರೆ ಯಾರಿಗೂ ಹೆಚ್ಚಿನ ಅನ್ಯಾಯವಾಗಲಿಕ್ಕಿಲ್ಲವೆಂದು ಹಲವರ ಅಭಿಪ್ರಾಯವಾಗಿದೆ. ಆದರೆ ಈ ರೀತಿಯನ್ನು ಕೈಕೊಳ್ಳುವರೋ ಎಂಬ ಸಂಶಯವು ಇತ್ತಲಾಗಿ ಹುಟ್ಟಿದೆಯೆಂದು ಸುದ್ದಿ. ಸರ್ಕಾರದವರು ತಾವು ಕೊಟ್ಟ ಮಾತಿಗೆ ವಿರೋಧ ಹೋಗಲಿಕ್ಕಿಲ್ಲವೆಂದೂ, ಹೆಚ್ಚಿನ ಸರ್ವಿಸಿನವರನ್ನೇ ಮೊದಲು ರಿಟಯರ್ ಮಾಡಿಸಿ ಜನರಲ್ಲಿರುವ ಅತೃಪ್ತಿಯನ್ನು ಹೋಗಲಾಡಿಸುವರೆಂದೂ ನಂಬುತ್ತೇವೆ.

ಕೌನ್ಸಿಲ್ ವಿಂಟಿಂಗು.

(5ನೇ ಪುಟದಿಂದ ಸಾಗಿದ್ದು)

ಮೆ. ಪಿ. ಐ. ಬೆಳ್ಯಪ್ಪನವರು–ಯಾವ ನಾಡು ಕಚ್ಚೇರಿಯನ್ನು ತೆಗೆಯಬಾರದೆಂದು ಸಭೆಯವರು ಪಾಸುಮಾಡಿದ ಮೇಲೆ ಇದೊಂದು ನಾಡು ಕಚ್ಚೇರಿಯನ್ನು ಮಾತ್ರ ತೆಗೆಯಬಾರದೆಂದು ಠರಾವು ತಂದದ್ದರಲ್ಲಿ ಅರ್ಥವಿಲ್ಲ. ಎರಡು ನಾಡು ಕಚ್ಚೇರಿಗಳನ್ನು ತೆಗೆಯಲೇ ಬೇಕೆಂದು ಸರ್ಕಾರವವರು ಹೇಳಿದ ಮೇಲೆ ಫ್ರೇಜರ್‌ಪೇಟೆ ನಾಡು ಖಚೇರಿಯನ್ನು ತೆಗೆಯಬಾರದೆಂದು ನಾವು ಹೇಳುವುದಾದರೆ ಉಳಿದ ಹತ್ತು ನಾಡು ಖಚೇರಿಗಳಲ್ಲಿ ಯಾವುದನ್ನಾದರೂ ತೆಗೆಯಬಹುದೆಂದು ನಾವು ಒಪ್ಪಿಗೆ ಕೊಟ್ಟಂತಾಗುವುದು. ಆದ್ದರಿಂದ ಸೂಚಕರು ಠರಾವನ್ನು ವಾಪಸು ತೆಗೆದುಕೊಳ್ಳುವುದು ಉತ್ತಮ. ಇಲ್ಲವಾದರೆ ನಾವು ಇದನ್ನು ವಿರೋಧಿಸುವ ಕಷ್ಟಕ್ಕೀಡಾಗಬೇಕಾಗುವುದು.

ಮೆ. ಎನ್. ಸೋಮಣ್ಣನವರು–ಈ ಮೊದಲು ಪಾಸು ಮಾಡಿದ ಠರಾವಿಗೂ ಇದಕ್ಕೂ ವಿರೋಧವಿಲ್ಲ. ಈ ಹೋಬಳಿಯು ಬಹಳ ಹಿಂದೆ ಬಿದ್ದಿರುವ ಕಾರಣ ಇಲ್ಲಿಯ ಖಚ್ಚೇರಿಯನ್ನು ತೆಗೆಯಕೂಡದೆಂದೇ ನನ್ನ ಒತ್ತಾಸೆಯಾಗಿದೆ.

ಮೆ. ಮಲ್ಲಪ್ಪನವರು ಉತ್ತರ ಕೊಟ್ಟ ಮೇಲೆ ಠರಾವನ್ನು ಓಟಿಗೆಹಾಕಲಾಗಿ, ಮೂರುಲಾಯರು ಮೆಂಬರುಗಳು, ಮೆ. ಯಂ. ಯಂ. ಬೆಳ್ಯಪ್ಪನವರು, ಮೆ. ಕಾಳಪ್ಪನವರು ಮತ್ತು ಅಬ್ದುಲ್ ರಹಮಾನ್ ಖಾನ್‌ರವರು ಪರವಾಗಿಯೂ, ಕಾಂಗ್ರೆಸ್ ಎಂಟು ಮೆಂಬರುಗಳು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ. [ಸಶೇಷ.

ಬಾತ್ಮೀ.

[ಬಾತ್ಮೀದಾರರು ಪಡುವ ಅಭಿಪ್ರಾಯಗೆಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ ಸಂ. ಕೊ

—೦೦—

ವೀರಾಜಪೇಟೆ ಹೈಸ್ಕೂಲು ಮರಗೆಲಸದ ಶಾಖೆ.

ಈ ಮರಗೆಲಸದ ತರಗತಿಯನ್ನು ಹಿಂದೆ ಡ್ರಿಲ್ ಮಾಡುತ್ತಿದ್ದ ಕಟ್ಟಡದೊಳಗೆ ನಡಿಸುತ್ತಿದ್ದರು. ಆಗ ಅದರೊಳಗೆ ಹಾಕಿದ ಮರಳನ್ನು ಇನ್ನೂ ತೆಗೆದಿರುವುದಿಲ್ಲ. ಇದರೊಳಗೆ ಹುಡುಗರು ಹೋಗಿ ಕೆಲಸ ಮಾಡುತ್ತಿರುವಾಗ ಯಾರಾದರೂ ಅಲ್ಲಿಗೆ ಹೋದರೆ ಎಷ್ಟು ಧೂಳು ಏಳುತ್ತದೆಂದೂ, ಅವರಿಂದ ಮುಂದಿನ ಜನಾಂಗವನ್ನು ಉದ್ಧರಿಸಲುಳ್ಳ ಶಾಲಾ ಬಾಲಕರ ಶರೀರದ ಬೆಳವಣಿಗೆಗೆ ಎಷ್ಟು ಹಾನಿಕರವೆಂದೂ, ಎಂಥಾ ಮೂಢನಿಗೂ ತಿಳಿಯುವುದು. ಮಕ್ಕಳ ತಂದೆ ತಾಯಿಗಳು ಇದನ್ನು ಕಂಡರೆ ಅವರ ಬಾಲಕರನ್ನು ಆ ತರಗತಿಗೆ ಕಳುಹಿಸಬೇಡವೆಂದು ಹೇಳುವರೆಂದು ನಾನು ಖಂಡಿತ ಹೇಳಬಲ್ಲೆ.

ಆ ವಿಷಯವಾಗಿ ಕೌನ್ಸಿನಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಅದಕ್ಕೆ ಶಾಲಾ ಇನ್ಸ್‌ಪೆಕ್ಟರು ಕೊಟ್ಟ ಜವಾಬನ್ನು ನೋಡಿದರೆ ಮೆಂಬರುಗಳನ್ನು ಇಂಗ್ಲಿಷಿನಲ್ಲಿ 'Quibble' ಮೂಲಕ ಹೇಗೆ ಮರಳುಗೊಳಿಸಿದರೆಂದೂ, ಕೇಳಿದ್ದನ್ನು ಬಿಟ್ಟು ಕೇಳದ್ದಕ್ಕೆ ಜವಾಬು ಕೊಟ್ಟರೆಂದೂ ಚೆನ್ನಾಗಿ ತಿಳಿಯುತ್ತೆ. ಇನ್ನೊಮ್ಮೆ ಆ ಪ್ರಶ್ನೆಗಳನ್ನೂ ಜವಾಬನ್ನೂ ನೋಡಿದರೆ ಇನ್‌ಸ್ಪೆಕ್ಟರ್ ಸಾಹೇಬರಿಗೆ ಸಂತೋಷವಾಗದಿರದು.

ಈ ಕಟ್ಟಡವನ್ನು ಇನ್ಸ್‌ಪೆಕ್ಟರೂ ಹೆಲ್ತ್ ಆಫೀಸರೂ ನೋಡಿದ್ದಾರೋ ಎಂಬದಕ್ಕೆ ತಾನು ನೋಡಿದ್ದೇನೆಂದೂ, ಹೆಲ್ತ್ ಆಫೀಸರು ನೋಡಿದ್ದಾರೆ ಯೂ ಇಲ್ಲವೆಂಬುದನ್ನು ಹೇಳುವುದು ಬಿಟ್ಟು ತಾನು ಮತ್ತು ಎಕ್ಸಿಕ್ಯುಟಿವ್ ಇಂಜಿನೀಯರು ನೋಡಿದ್ದೇವೆ ಎಂದರು. ಎಕ್ಸಿಕ್ಯುಟಿವ್ ಇಂಜಿನೀಯರ್ ನೋಡಿದ್ದಾರೋ ಎಂದು ಕೇಳಲೇ ಇಲ್ಲ. ಇಂಥಾ ಜವಾಬು ಅಂಗಡಿಗೆ ಹೋಗಿ ಒಂದು ಸಾಮಾನು ಇದೆಯೋ ಎನ್ನುವಾಗ ಅದಲ್ಲ ಇದಿದೆ ಎಂದಂತಾಯಿತು.

ಸದರಿ ಕಟ್ಟಡವನ್ನು ಧೂಳಿಲ್ಲದೆಯೂ ಕೆ ಮಾಡಲಿಲ್ಲವೆಂಬುದಕ್ಕೆ, ಯಾವ ಕಟ್ಟಡವನ್ನೂ ಧೂಳು ಸೇರದೆ ಮಾಡಲಿಕ್ಕಾಗುವುದಿಲ್ಲವೆಂಬ ಜವಾಬು ಬಂತು. ಈ ಸಮಾಚಾರ ಎಲ್ಲರಿಗೂ ಗೊತ್ತಿದೆಯೇ ಯೂ ಈಗ ಗೊತ್ತಾಯಿತೋ ಎಂದು ವಾಚಕರೇ ಊಹಿಸಲಿ.

ಈ ಕಟ್ಟಡವನ್ನು ದುರಸ್ತು ಮಾಡಲು ಹಣವಿರಲಿಲ್ಲ ಎಂದು ಕಡೆಗೆ ಹೇಳಿದರು. ಆದರೆ ಇಲ್ಲಿಯಣ ಹುಡುಗರು 1933ನೇ ಇಸವಿಯಿಂದಲೇ ಧೂಳು ತಿನ್ನುತ್ತಿದ್ದರೂ ಅದನ್ನು ದುರಸ್ತು ಮಾಡಲು ಹಣವಿಲ್ಲ. ಮಡಿಕೇರಿಯಲ್ಲಿ ಈ ವರ್ಷ ಸದರಿ ತರಗತಿಯನ್ನು ತೆರೆಯುವ ಮೊದಲು ಅಲ್ಲಿಯ ಡ್ರಿಲ್ ಕಟ್ಟಡದ ನೆಲವನ್ನು ದುರಸ್ತು ಮಾಡಿದರಲ್ಲ, ಅದಕ್ಕೆ ಹಣ ಹೇಗೆ ಬಂತೆಂದು ಕೇಳಿದಕ್ಕೆ ಸರಿಯಾದ ಜವಾಬೇ ಇಲ್ಲ. ಮೊದಲು ಕೊಟ್ಟ ಜವಾಬು ನೋಡಿಕೊಳ್ಳಿ ಎಂದು ಹೇಳಿರುವರು.

ಇಂಥಾ ಉತ್ತರದಿಂದ ಪ್ರಶ್ನೆ ಕೇಳಿದವರಿಗೆ ಎಷ್ಟು ತೃಪ್ತಿಯಾಯಿತೋ ತಿಳಿಯದು ಆದರೆ ಇಂಥಾ ಜವಾಬಿನಿಂದ ವೀರಾಜಪೇಟೆ ಶಾಲಾ ಬಾಲಕರ ತಂದೆ ತಾಯಿಗಳಿಗೆ ಮನ ನೊಂದಿದೆಯೆಂದು ಶಾಲಾ ಇನ್ಸ್‌ಪೆಕ್ಟರರು ಚೆನ್ನಾಗಿ ತಿಳಿದಿರಲಿ. ಸರ್ಕಾರಕ್ಕೆ ಸಹ ಮುಖ್ಯ ಪಟ್ಟಣದಲ್ಲಿ ಮತ್ತು ಅವರ ಹತ್ತಿರವಿರುವವರ ಹೆದರಿಕೆಯೂ ಅವರನ್ನು ತೃಪ್ತಿಗೊಳಿಸಬೇಕೆಂಬ ಆಶೆ ಇದೆಯೆಂದೂ ದೂರದಲ್ಲಿರುವವರ ಹೇಳಿಕೆಗೆ ಗಮನ ಕೊಡಬೇಕಾಗಿಲ್ಲವೆಂದೂ, ಅವರಿಗೂ ನ್ಯಾಯ ತೋರಿಸಬೇಕೆಂಬ ಅಪೇಕ್ಷೆ ಸರ್ಕಾರಕ್ಕೆ ಇಲ್ಲವೆಂದೂ ಈ ವಿಷಯದಿಂದ ತಿಳಿದಂತೆ ನನಗೆ ತೋರುತ್ತದೆ.

ಮಕ್ಕಳ ತಂದೆ.

COORG FOREST DEPAETMENT,
Mercara, the 31st Oct. 1938,

SALE NOTICE.

Tenders are invited for clear felling and removing junglewood & branch pieces, etc,, from 1938 Devamachi Coupe in Tittimatti Range and Begur Paisaris in Nagerhole Range. Each tender should be accompanied by Earnest Money Deposit of Rs. 100 and 50 in currency notes and reach the Divisional Forest Officer, South, on or before 12 noon on 15–11–1938.

For further particulars please apply to the Divisional Forest Officer, South Coorg, Mercara.

COORG CIVIL SURGEON'S OFFICE,
Mercara, the 26th Oct, 1938.

NOTICE.

Sealed tenders will be received at the Civil Surgeon's Office, Mercara, up to 11 a. m. on Friday the 20th January 1939, for the supply by contract of all articles of diet, etc., required separately for the use of the inpatients of (1) Mercara, (2) Virajpet and (3) Somwarpet, from 1st April 1939 to 31st March 1940 (both days inclusive).

For further particulars, apply to the Medical Officer in charge of the hospital concerned.

G. P. Charlewood,
Captain, I. M. S.,
Civil Surgeon, Coorg.

ನೋಟೀಸು.

(1) ಮಡಿಕೇರಿ, (2) ಸೋಮವಾರಪೇಟೆ ಮತ್ತು (3) ವೀರಾಜಪೇಟೆ ಆಸ್ಪತ್ರೆಗಳಲ್ಲಿರುವ ಕಾಯಿಲಸ್ಥರ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಕಂಟ್ರಾಕ್ಟು ಮೂಲಕ 1939ನೇ ಏಪ್ರಿಲ್ 1ರಿಂದ 1940ನೇ ಮಾರ್ಚಿ 31ರ ವರೆಗೆ (ಈ ಎರಡು ದಿನಗಳು ಸೇರಿ) ಈ ಮೂರು ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿಕೊಡಲು ಮುದ್ರೆ ಹಾಕಿದ ದರಕಾಸ್ತುಗಳು (ಟೆಂಡರ್) 1939ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಗ್ಗೆ 11 ಗಂಟೆಯ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಯ ಚಾರ್ಜಿನಲ್ಲಿರುವ ಆಫೀಸರಿಗೆ ಬರೆದುಕೊಳ್ಳುವುದು.

ಜಿ. ಪಿ. ಚಾರ್ಲಿವುಡ್,
ಕ್ಯಾಪ್ಟನ್, ಐ. ಯೆಂ. ಎಸ್.,
ಸಿವಿಲ್ ಸರ್ಜನ್, ಕೊಡಗು.

COORG FOREST DEPARTMENT,
SOUTH DIVISION,
Mercara, the 5th Nov. 1938.

Timber Sale Notice.

For sale by public auction on 17–11–1938 at Hunsur Depot commencing at 10 a. m. approximately, 9307 cft. of teak, 625 cft. of teak branch pieces, 1639 cft. of biti, 21 cft. of biti branch pieces, 6458 cft. of honne, 181 cft. of honne branch pieces 496 cft. of matti, 32 cft of matti branch pieces, 9018 cft. of nandi and 43 cft. of nandi branch pieces lying ex-forest depots of Tittimatti and Somwarpet Ranges.

The timber is open for inspection.

For further particulars apply to the Divisional Forest Officer, South Coorg. Mercara,

---

COORG CIVIL SURGEON'S OFFICE,
Mercara, the 26th Oct. 1838,

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1939 to 31st March 1940, will be received at the Civil Surgeon's Office, Mercara, up to 11 a. m. on Friday the 20th January 1939.

For terms and other particulars, apply to the Assistant Health Officer, Coorg, Mercara, or the Civil Surgeon's Office at Mercara.

G. P. Charlewood,
Captain. I. M. S.,
Civil Surgeon, Coorg.

ನೋಟೀಸು.

1939ನೇ ಏಪ್ರಿಲ್ 1ರಿಂದ 1940ನೇ ಮಾರ್ಚ 31ರ ವರೆಗೆ ಒಂದು ವರ್ಷ ಮಡಿಕೇರಿ ವೇಕ್ಸಿನ್ ಇಲಾಖೆಗೆ ಕರಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿರುವ ದರಕಾಸ್ತುಗಳು (ಟೆಂಡರ್ಸ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1939ನೇ ಜನವರಿ ತಾರೀಕು 30ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವದು.

ಶರತ್ತುಗಳಿಗೂ, ಹೆಚ್ಚಿನ ವಿವರಗಳಿಗೂ ಅಸಿಸ್ಟೆಂಟ್ ಹೆಲ್ತ್ ಆಫೀಸರ್, ಕೊಡಗು, ಮಡಿಕೇರಿ ಆಥವಾ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವದು.

ಜಿ. ಪಿ. ಚಾರ್ಲಿವುಡ್,
ಕ್ಯಾಪ್ಟನ್ ಐ. ಎಂ. ಎಸ್.
ಸಿವಿಲ್ ಸರ್ಜನ್, ಕೊಡಗು.

ವರ್ತಮಾನ ಸಂಗ್ರಹ.

ಒಳದೇಶ.

ತಾರೀಕು 5-11-38 ರಲ್ಲಿ ಕೊಡಗಿನ ಎಲ್ಲಾ ಸಹಕಾರಿ ಯೂನಿಯನ್ ಸೆಂಟರುಗಳಲ್ಲಿ ಅಖಿಲ ಭಾರತ ಸಹಕಾರಿ ದಿನವು ಆಚರಿಸಲ್ಪಟ್ಟಿತು.

ಮೂರ್ನಾಡು.

ಇಲ್ಲಿಯ ಹೈಯರ್ ಎಲಿಮೆಂಟರಿ ಶಾಲೆಯ ವೋಷಕರ ದಿನೋತ್ಸವವು ತಾ. 10 ನೇ ಗುರುವಾರ ಕೊಡಗು ಶಾಲೆಗಳ ಡಿ. ಇನ್ಸ್‌ಪೆಕ್ಟರ್ ಶ್ರೀ ಬಿ. ಎಸ್. ಕುಶಾಲಪ್ಪ ಬಿ. ಎ., ಡಿ. ಇ ಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಮಡಿಕೇರಿ.

ಮೈಸೂರಿನ ಹರಿಕಥಾಗಾರರ ಪ ಸಂಗೀತ ರತ್ನ ಶ್ರೀ ಸೀತಾರಾಮ ಶಾಸ್ತ್ರಿಯವರು ವೇದಾಂತ ಸಂಘದ ಆಶ್ರಯದಲ್ಲಿ 'ರುಕ್ಮಿಣಿ ಕಲ್ಯಾಣ'ವೆಂಬ ಹರಿಕಥೆಯನ್ನು ಸ್ವಾರಸ್ಯವಾಗಿ ಮಾಡಿದರು.

ಇಲ್ಲಿಯ ವೇದಾಂತ ಸಂಘದ ವಾರ್ಷಿಕ ಮಹಾ ಸಭೆಯು ತಾರೀಕು 13 ನೇ ಭಾನುವಾರ ಸಂಘದ ಹಾಲ್‌ನಲ್ಲಿ ಶ್ರೀ ಸಿ. ಯಂ. ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವದು.

ಇಲ್ಲಿ 11-9-38 ರಲ್ಲಿ ನಡೆದ ಪ್ರಾಥಮಿಕ ಹಿಂದೀ ಪರೀಕ್ಷೆಯಲ್ಲಿ ಶ್ರೀ ಐ. ಬಿ. ಮತ್ತಪ್ಪನವರೂ, ಶ್ರೀಮತಿ ಎಚ್. ಪಿ. ಎಗ್ಗಮ್ಮನವರೂ, ಮಾಧ್ಯಮಿಕ ಪರೀಕ್ಷೆಯಲ್ಲಿ ಶ್ರೀಮತಿ ಎಚ್. ಟಿ. ಲೀಲಾ, ಶ್ರೀಯುತರುಗಳಾದ ಕೆ. ವೆಂಕಟಗಿರಿರಾವ್ ಬಿ. ಎ., ಎಲ್ ಎಲ್. ಬಿ., ಯಂ. ಯನ್. ಕೇಶವಭಟ್ಟರು ಮತ್ತು ಬಿ. ಕೆ. ರಾಮಕೃಷ್ಣರವರೂ ತೇರ್ಗಡೆಯಾಗಿರುವರು.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಸಹಾಯಾರ್ಥವಾಗಿ, ಹೈಸ್ಕೂಲ್ ಹಾಲಿನಲ್ಲಿ ಕೀರ್ತನ ರತ್ನ ಕೆ. ಎಸ್. ಶೇತಾರಾಮ ಶಾಸ್ತ್ರಿಯವರು ತಾ. 14 ನೇ ಸೋಮವಾರ 5-30 ಗಂಟೆಗೆ ಸಂಗೀತ ಖಚೇರಿ ನಡೆಸುವದಾಗಿ ಫಂಡಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇಲ್ಲಿ ಯಾಲಕ್ಕಿ ಮಣಕ್ಕೆ ರೂ. 23 ಕಾಫಿ ಖಂಡಿಗೆ ರೂ. 105 ಕ್ರಯವಿರುವದಾಗಿ ತಿಳಿಯುತ್ತೇವೆ.

ಪಬ್ಲಿಕ್ ಎಕೌಂಟ್ಸ್ ಕಮಿಟಿಯ ಮೀಟಿಂಗು ಈ ತಾ. 12 ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯುವುದು. ಈ ಮೀಟಿಂಗಿನ ಉದ್ದಿಶ್ಯ ಮದ್ರಾಸು ಪ್ರಾಂತ್ಯ ಎಕೌಂಟೆಂಟ್ ಜನರಲರಾದ ಮೆ. ಪಿ. ಕೆ. ವಟ್ಟಾಲ್‌ರವರು ಈ ದಿನ ಇಲ್ಲಿಗೆ ಬರಲಿರುವರು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 20 ರಲ್ಲಿ ಬೆಳಿಗ್ಗೆ 11 ಗಂಟೆಗೂ, ಸುಪರ್‌ವಿಜನ್ ಬೋರ್ಡಿನ ಮೀಟಿಂಗು ಸಾಯಂಕಾಲ 3 ಗಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿವೆ.

'ಕೊಡಗು' ಕಂಪೆನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ಈ ತಾ. 26 ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆ ಅಂಜುಮನ್ ಹಾಲ್‌ನಲ್ಲಿ ನಡೆಯುವುದು.

ಶ್ರೀಮಂಗಲ.

ಇಲ್ಲಿ ಕಳೆದ ವಾರ ಮಳೆ ಬಿದ್ದಿರುವದರಿಂದ ಬೆಳೆ ಒಣಗಿಹೋಗುವದೆಂಬ ಭಯವು ತಪ್ಪಿದೆ.

ವೀರಾಜಪೇಟೆ.

ಇಲ್ಲಿಯ ಹೈಸ್ಕೂಲ್ ಬೋರ್ಡಿಂಗನ್ನು ಬದಲಾಯಿಸುವ, ಮತ್ತು ಹುಡುಗಿಯರ ಶಾಲೆಯನ್ನು ತೆಗೆಯುವ ವಿಚಾರ ದಕ್ಷಿಣ ಕೊಡಗಿನವರು ಚೀಫ್ ಕಮಿಷನರಿಗೆ ಬರೆದ ಜ್ಞಾಪಕ ಪತ್ರಕ್ಕೆ, ಸಿಬ್ಬಂದಿ ಖೋತೆಯಲ್ಲಿ, ಪತ್ರದಲ್ಲಿ ನಮೂದಿಸಿರುವ ಯಾವದೊಂದು ತೊಂದರೆಯೂ ಬರದಹಾಗೆ ವರ್ತಿಸಲಾಗುವದೆಂದು ಶಾಲಾ ಇನ್ಸ್‌ಪೆಕ್ಟರರು ತಿಳಿಸಿರುವರು.

ನಿಧನ ವಾರ್ತೆ.

ಮಡಿಕೇರಿಯಲ್ಲಿ ಲಾಯರಾಗಿದ್ದ ಶ್ರೀ ಎನ್. ರಾಮಯ್ಯನವರು ತಾರೀಕು 7-11-38 ರಲ್ಲೂ ಮಧ್ಯಪ್ರಾಂತದ ಬೈಹಾರ್ ಎಂಬಲ್ಲಿ ದೇಂಜರಾಗಿರುವ ಶ್ರೀ ಕೋಣೇರಿರ ತಿಮ್ಮಯ್ಯನವರ ಪತ್ನಿಯವರು ತಾ. 6-11-38 ರಲ್ಲೂ ಶಿವಾದೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ನಾಪೋಕ್ಲು.

ಇಲ್ಲಿಯ ಸಿವಿಲ್ ಆಸ್ಪತ್ರೆಯ ಡಾಕ್ಟರರು ಕಾಯಲ್ಸ್ತರಾಗಿ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ, ಅವರ ಬದಲಿಗೆ ಇಲ್ಲಿ ಯಾರನ್ನೂ ನೇಮಿಸದ್ದರಿಂದ ಜನರಿಗೆ ತೊಂದರೆಯಾಗಿದೆಯೆಂದೂ ತಿಳಿದುಬರುತ್ತದೆ.

ಅಖಿಲ ಕೊಡಗು ಉಪಾಧ್ಯಾಯರ 10 ನೇ ಸಮ್ಮೇಳನವು ಈ ವರ್ಷ ಇಲ್ಲಿ ಬೆಂಗಳೂರಿನ ಶ್ರೀ ಬಿ. ಯಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಬರುವ ತಿಂಳು 3, 4 ಮತ್ತು 5 ರಲ್ಲಿ ನಡೆಯುವದೆಂದೂ, ಆ ಕಾಲಕ್ಕೆ ಶಾಲಾ ಬಾಲಕರ ಕೈಕೆಲಸದ ಸಾಮಾನುಗಳ ಪ್ರದರ್ಶನವೂ ಮತ್ತು ಎಂದಿನಂತೆ ಆಟೋಟಗಳ ಸ್ಪರ್ಧೆಯೂ ನಡೆಯುವದೆಂದೂ ತಿಳಿಯಬರುತ್ತದೆ.

ಅಕಸ್ಮಿತ ಮರಣ.

ನಾಪೋಕ್ಲಿನ ಕುಂಜಿಲಗೇರಿ ಗ್ರಾಮದ ಬಿಲ್ಲವರ ಮಾಯಿಲನೆಂಬವನು ತಾ. 4 ರಲ್ಲು ಬೈನೆನುರ ಹತ್ತಿದವನು ಕಾಲು ಜಾರಿ ಬಿದ್ದು ಮೃತಪಟ್ಟಿರುವನು.

ಸಂಪಾಜೆ.

ಇಲ್ಲಿಯ ಮಲ್ಲೇಶ್ವರ ಸಂಘದ ಆಶ್ರಯದಲ್ಲಿ ಜನತೆಗೆ ಅಕ್ಷರಭ್ಯಾಸ ಮಾಡಿಸಲು ಎರಡು ರಾತ್ರಿ ಶಾಲೆಗಳು (Night Schools) ತಾರೀಕು 31-10-38 ರಿಂದ ತೆರೆಯಲ್ಪಟ್ಟಿರುವವೆಂದೂ, ರಾತ್ರಿ 8 ಗಂಟೆಯಿಂದ 10 ಗಂಟೆಯ ವರೆಗೆ ಪಾಠ ಹೇಳಲ್ಪಡುವದೆಂದೂ, ಈಗಾಗಲೇ 16 ವರ್ಷಕ್ಕೆ ಮೇಲ್ಪಟ್ಟು 45 ವರ್ಷದೊಳಗಿನ 45 ಜನರು ಅಭ್ಯಾಸ ಮಾಡುತ್ತಿರುವರೆಂದೂ ಸದ್ಯದಲ್ಲೇ ಇನ್ನೊಂದು ಸ್ಕೂಲ್ ಇದೇ ಸಂಘದ ಆಶ್ರಯದಲ್ಲಿ ತೆರೆಯಲ್ಪಡುವದೆಂದೂ ತಿಳಿದು ಬರುತ್ತದೆ. ಇಂಥಾ ಜನೋಪಕಾರಿ ಕಾರ್ಯ ಕೈಕೊಂಡ ಸಂಘದವರಿಗೆ ನಮ್ಮ ಅಭಿವಂದನೆಗಳಿವೆ.

ಪೊನ್ನಂಪೇಟೆ.

ಕಳೆದ ವಾರ ಇಲ್ಲಿ ಮಳೆಯೂ ದ್ದರಿಂದ ನೀರಿನ ಅಭಾವದಿಂದ ಬೆಳೆ ಒಗಿಗಿ ಹೋಗುವದೆಂದು ನಿರಾಶೆಗೊಂಡಿದ್ದವರು ಆನಂದಿತರಾಗಿರುವರು. ಈ ಮಳೆಯಿಂದ ಕದರು ದಾಟಲು ಬಹಳ ಅನುಕೂಲವಾಗಿದೆ.

ಹಿಂದೂದೇಶ.

ಬೊಬ್ಬಿಲಿ ರಾಜರವರು ಜಸ್ಟೀಸ್ ಪಾರ್ಟಿಯ ಲೀಡರ್ ಪದವಿಗೆ ರಾಜೀನಾಮೆ ಕೊಟ್ಟಿರುವರು.

ಆಸಾಮಿನಲ್ಲಿ ಕಾಂಗ್ರೆಸಿನ ಮಂತ್ರಿತ್ವದ ಬುಡ ಗಟ್ಟಿಯಾಗುತ್ತಿದೆ. ಯೂರೋಪಿಯನರೂ, ಮುಸ್ಲಿಮರೂ ತಮ್ಮ ಮನಸ್ಸು ಬದಲಾಯಿಸುತ್ತಿದ್ದಾರೆ. ಪಾನ ನಿಷೇಧ, ಆಫೀಮಿನ ಪ್ರಚಾರ ಮೊದಲಾದ ಕಾಂಗ್ರೆಸಿನ ಕಾರ್ಯಕ್ರಮಗಳು ಬೇಗನೆ ಜಾರಿಗೆ ಬರಲಿವೆ.

ಮದ್ರಾಸ್ ಸರ್ಕಾರವು ಪ್ರತಿಯೊಬ್ಬ ಜಿಲ್ಲಾಧಿಕಾರಿಗೂ ಒಂದು ನಿರೂಪವನ್ನು ಕಳುಹಿಸಿ ಅದರಲ್ಲಿ ಅವನು ತನ್ನ ಜಿಲ್ಲೆಯಲ್ಲಿ ಓದಿದ ನಿರುದ್ಯೋಗಿಗಳ ಸಂಖ್ಯೆಯನ್ನು ತೆಗೆಯಬೇಕೆಂದು ಆಜ್ಞೆ ಮಾಡಿದ್ದಾರೆ. ಸರ್ಕಾರವು ಬೇಗನೆ ಓದು ಬರಹ ಬಲ್ಲ ರೈತರಿಗೆ ಆದರ್ಶಸ್ಥಾನಗಳನ್ನು ಕಲ್ಪಿರುವವರಿದ್ದಾರೆ.

ತಿರುವಾಂಕೂರು ಸಂಸ್ಥಾನದಲ್ಲಿ ಕ್ರಿಲಾ. ಎ. ಆಕ್ಟ್ ಅಥವಾ ಸಾಮಾನ್ಯ ಕ್ರಿಲಾ. ವಿನ ಮೇರೆಗೆ ದಂಡನೆಗೆ ಗುರಿಯಾಗಿದ್ದ 300 ಮಂದಿ ಕೈದಿಗೆಳ ಬಿಡುಗಡೆಯಾಯಿತು. ಆದರೆ ಹಿಂಸಾ ಪ್ರಯೋಗವನ್ನು ಮಾಡಿದ ಯಾವ ಕೈದಿಯನ್ನೂ ಬಿಟ್ಟಿಲ್ಲ. ರಾಜಕ್ಯಪೆಯ ಸಂದೇಶವು ಅವರನ್ನು ಬಿಡುಗಡೆ ಮಾಡುವುದಾಗಿಲ್ಲ.

ಪಂಜಾಬಿನ ಲೆ. ಎಸೆಂಬ್ಲಿಯ ಚೀಫ್ ವ್ಹಿಪ್ಪರಾದ ಶೇಟ್ ಸುದರ್ಶನದಾಸ ಇವರು ಅಸೋಶಿಯೇಟೆಡ್ ಸುದ್ದಿಗಾರನಿಗೆ ಈ ತಿಂಗಳ ತಾ. 10 ನೇ ದಿವಸ ಕೂಡಲಿರುವ ಅಸೆಂಬ್ಲಿ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷದ ಸಭಾಸದರು ಭಾಗವಹಿಸುವದಿಲ್ಲವೆಂದು ತಿಳುಹಿಸಿದರು. ಪಂಜಾಬ್ ಗವರ್ನರರು ಈ ಅಧಿವೇಶನದ ಅನಾವರಣ ನೆರವೇರಿಸುವರು.

ಈಗ ಬರತಕ್ಕದ್ದಿರುವ ಕಾಂಗ್ರೆಸ್ ಅಧಿವೇಶನ ಸಮಯದಲ್ಲಿ, ಅಂದರೆ ಅಧಿವೇಶನ ನಡೆಯುವ ನಾಲ್ಕು ದಿನಗಳಲ್ಲಿ ಎಲ್ಲಾ ಕೋರ್ಟು ಖಚೇರಿಗಳಿಗೂ ರಜೆ ಇರಬೇಕೆಂಪೂ, ಯಾವ ಉದ್ಯೋಗಸ್ಥನೇ ಆಗಲಿ, ಅಧಿವೇಶನಕ್ಕೆ ಹೋಗಲು ಆತಂಕ ವಿರಬಾರದೆಂತಲೂ, ಮಧ್ಯ ಪ್ರಾಂತ ಸರಕಾರದವರು ಪ್ರಾಂತೀಕ ಸರ್ಕಾರಕ್ಕೆ ಸಲಹೆ ಕೊಟ್ಟಿರುವರು.

ಮುಂದಿನ ತ್ರಿಪುರಿ ಕಾಂಗ್ರೆಸಿನ ಸಂಬಂಧ ಜಬ್ಬಲ್ಪುರ ಪ್ರಾಂತಕ್ಕೆ ಭೇಟಿ ಕೊಟ್ಟ ಪ್ರಧಾನ ಶುಕ್ಲ ಮೊದಲಾದವರ ಸಾನಿಧ್ಯದಿಂದ ಆ ಅಧಿವೇಶನಕ್ಕೆ ಕಳೆ ಏರಿದೆ. ವಂತಿಗೆ ಧಾರಾಳವಾಗಿ ಬರುತ್ತಿದೆ. ಶ್ರೀಗಳಾದ ಮೋಹನಲಾಲ್ ಹರಗೋವಿಂದಾಸ್ ಇವರು ರೂ. 5 ಸಾವಿರವನ್ನೂ, ಚೊಲಿಯ ರಾಮ ಗುಲ್ಶಬ್‌ಚಂದ್‌ರವರು 1 ಸಾವಿರವನ್ನೂ ಇಷ್ಟರಲ್ಲಿಯೇ ವಂತಿಗೆಯಾಗಿ ಕಳುಹಿಸಿರುತ್ತಾರೆ.

ಪಂಚಾಬಿನ ಶ್ರೀ ಸಚ್ಚಿದಾನಂದ ಶರ್ಮರೆಂಬ ಕಲಾ ನಿಪುಣರೊಬ್ಬರು ಒಂದು ಪೋಸ್ಟ್ ಕಾರ್ಡಿನಲ್ಲಿ 579,000 ಅಕ್ಷರಗಳ 500 ಪಂಕ್ತಿಯನ್ನು ಬರೆದಿರುವರಲ್ಲದೆ, ರವೀಂದ್ರರ ಗೀತಾಂಜಲಿ ಹಾಗೂ ಅದರ ದೀರ್ಘವಾದ ಮುನ್ನುಡಿಯನ್ನೂ ಮತ್ತೊಂದು ಪೋಸ್ಟ್ ಕಾರ್ಡಿನಲ್ಲೇ ಬರೆದು ವಿಸ್ಮಯವನ್ನುಂಟುಮಾಡಿದ್ದಾರೆ. ಎರಡನೆಯ ಪೋಸ್ಟ್ ಕಾರ್ಡು ಸಿಮ್ಲಾ ಪ್ರದರ್ಶನದಲ್ಲಿ ತೋರಿಸಲಾಗಿದ್ದಿತು.

ಮೂರಾಟಕ್ಕೆ.

ಜೇನು ಪೆಟ್ಟಿಗೆಯ ಒಳಗಿಡುವ ಚೌಕಟ್ಟುಗಳು-8 ದೊಡ್ಡವು-8 ಚಿಕ್ಕವುಗಳು ಬರೇ ಒಂದು ರೂಪಾಯಿಗೆ ಮಾರಲ್ಪಡುತ್ತೆ.

ಎರಿಗಳು ಜೇನು ತುಂಬಿದ್ದು ಬೆಳ್ಳಗಿದ್ದರೆ ಒಳ್ಳೇ ಬೆಲೆಗೆ ಕೊಂಡುಕೊಳ್ಳಲಾಗುವುದು.

ಜೇನು ಮತ್ತು ಮೇಣ ಸಹಕಾರಿ ಸಂಘ, ವೀರಾಜಪೇಟೆ.

4-1

ನೋಟೀಸು.

1938ನೇ ಇಸವಿ ನವಂಬರು ತಾ. 26ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆಯಲ್ಲಿರುವ ಅಂಜುಮಾನ್ ಹಾಲ್‌ನಲ್ಲಿ "ಕೊಡಗು" ಕಂಪೆನಿಯ ಶೇರುದಾರರ ಮಹಾ ಸಭೆಯು (ಜನರಲ್ ಮೀಟಿಂಗು) ಸೇರುವುದೆಂದು ಈ ಮೂಲಕ ತಿಳಿಸೋಣಾಗಿದೆ. ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ.

1. 1937-38ನೇ ವರ್ಷದ ಆಡಳಿತ ವರದಿಯನ್ನೂ, ಇದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರವರ ಸರ್ಟಿಫಿಕೇಟನ್ನೂ ಸಹ ಸಭೆಯ ಮುಂದೆ ಇರಿಸುವುದು.

2. 1933-34 ಮತ್ತು 1934-35 ಈ ಎರಡು ವರ್ಷಗಳಲ್ಲಿ ವಸೂಲಾಗದೆ ಇರುವ ಚಂದಾ ಹಣದ ವಿಷಯ.

3. ಆಡಿಟರವರನ್ನು ನೇಮಿಸುವಿಕೆ.

4. 1937-38ನೇ ವರ್ಷಕ್ಕೆ ಆಡಿಟರವರಿಗೆ ಕೊಡಬೇಕಾದ ಫೀಜು ನಿಷ್ಕರ್ಷೆ ಮಾಡುವಿಕೆ.

5. ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

ಯು. ಯಂ. ಅಣ್ಣಯ್ಯ.
(ಕಾರ್ಯಾಧ್ಯಕ್ಷರು.)
"ಕೊಡಗು" ಲಿಮಿಟೆಡ್,
ಮಡಿಕೇರಿ, 9-11-1938.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯ
ಗಳಿಗೆ ಪತ್ರಿಕಾಕರ್ತರು ಜವಾಬ್ದಾರ
ರಲ್ಲ. [ಕೊ. ಸಂ.

ಕೊಡಗಿನ ಶಾಲೆಗಳು.

ವಿದ್ಯೆಯೆಂಬುದು ಮಕ್ಕಳಿಗೆ ಆರ್ಥಿ
ಕ, ಸಾಮಾಜಿಕ ಮತ್ತು ರಾಜಕೀಯ
ಜ್ಞಾನ ಸಂಪಾದನೆ ಮಾಡಿ ಮುಂದಿನ ದೇ
ಶದ ಸತ್ಪ್ರಜೆಗಳನ್ನಾಗಿ ಮಾಡಬೇಕಾಗಿ
ರುವುದರಿಂದ, ಶಾಲೆಗಳಲ್ಲಿ ದರ್ಜೆವಾರು
ಏಂಗಡಿಸಲ್ಪಟ್ಟಿರುವ ತರಗತಿಗಳಿಗೆ ಆಯಾ
ತರಗತಿಗಳಷ್ಟೇ ಜ್ಞಾನ ಸಂಪಾದನೆಯುಳ್ಳ
ರುತ್ತು ಅಷ್ಟೇ ತೇರ್ಗಡೆ ಹೊಂದಿರುವ ಉ
ಪಾಧ್ಯಾಯರುಗಳನ್ನೇ ಬೋಧಕರಾಗಿ ಇ
ರುವುದರಿಂದ ವಿದ್ಯಾರ್ಥಿಗಳಿಗೆ ಸರಿಯಾಗಿ
ಜ್ಞಾನ ಸಂಪಾದನೆಯಾಗದೆ ಈಗಿನ ಪಾಠ
ಪುಸ್ತಕಗಳನ್ನು ಕಂಠ ಪಾಠ ಮಾಡಿಸಿ ಪ
ರೀಕ್ಷೆ ಮಾಡಿಸುವುದೇ ಉದ್ದಿಶ್ಯವಾಗಿದೆ.

ಕೊಡಗಿನಲ್ಲಿ ಎರಡೇ ಹೈಸ್ಕೂಲುಗಳಿ
ದ್ದು ದೇಶವ ಬಾಲಕರಲ್ಲಿ ಶೇಕಡ 10 ರ
ಷ್ಟು ಮುಂದಿನ ಮಾಧ್ಯಮಿಕ ಮತ್ತು
ಶ್ರೇಷ್ಠ ವಿದ್ಯಾಭ್ಯಾಸದಲ್ಲಿ ತೊಡಗಲೂ ಅ
ನುಕೂಲವಿಲ್ಲವಾದ ಕಾರಣ ಕೊಡಗಿನ
ಕೌನ್ಸಿಲಿನಲ್ಲಿ ಅನೇಕ ವರ್ಷಗಳ ಹೋರಾ
ಟದ ಫಲವಾಗಿ ಹಾಗೆಯೇ ಉಳಿಯಬಹು
ದಾದ ಶೇಕಡ 90 ಬಾಲಕರು ಶಾಲೆಯ
ನ್ನು ಬಿಡುವುದರೊಳಗಾಗಿ ಅವರಿಗೆ ಕಡಿ
ಮೆಪಟ್ಟಲೋಕನ್ಯವಹಾರ ಜ್ಞಾನವಾದರೂ ಸಿ
ಕ್ಕಬೇಕೆಂಬ ಉದ್ದಿಶ್ಯದಿಂದ ಈಗಿನ ಹೈಯ
ರ್ ಎಲಿಮೆಂಟರಿ ಶಾಲೆಗಳು ಏರ್ಪಟ್ಟವು.
ಆ ಉದ್ದಿಶ್ಯವು ಇತ್ತೀಚೆಗೆ ಮೂರ್ನಾಟು
ಹೊಂದಿ ಈ ಬಾಲಕರು ಈಗ ನಡೆಸುತಿ
ರುವ ಬೋರ್ಡು ಪರೀಕ್ಷೆಗಳಲ್ಲಿ ಹೈಸ್ಕೂ
ಲ್ ಬಾಲಕರಂತೆಯೇ ತೇರ್ಗಡೆ ಹೊಂದ
ಬೇಕಾಗಿ ಏರ್ಪಡಿಸಿರುತ್ತಾರೆ.

ಹೀಗಿರುವಲ್ಲು ಅಂಥಾ ಪರೀಕ್ಷೆಗಳಿ
ಗೆ ಬಾಲಕರನ್ನು ತರಬೇತು ಮಾಡುವ ಹೈ
ಸ್ಕೂಲಿನ ಎಲ್. ಟಿ. ಗ್ರೇಡಿನ ಉಪಾಧ್ಯಾ
ಯರುಗಳಿಂದ ತರಬೇತಾದ ಬಾಲಕರ
ಜೊತೆಯಲ್ಲಿ ಹೈಯರ್ ಎಲಿಮೆಂಟರಿ ಆ
ಥವಾ ಸೆಕೆಂಡರಿ ಗ್ರೇಡಿನ ಉಪಾಧ್ಯಾಯ
ರುಗಳಿಂದ ಸ್ಪರ್ಧಿಸುವುದು ತುಂಬಾ ಶೋ
ಚನೀಯವಾದ ಮತ್ತು ಆಶ್ಚರ್ಯಕರವಾ
ದ ಸಂಗತಿಯೂಗಿದೆ. ದೇಶದ ಮುಂದಿನ
ಪ್ರಜೆಗಳಾದ ಮಕ್ಕಳ ಜ್ಞಾನಾಭಿವೃದ್ಧಿ
ದೃಷ್ಟಿಯಲ್ಲಿ ಇದೊಂದು ಬಗೆಯ ಕುಂದು
ಕೊರತೆ ಎಂದರೆ ತಪ್ಪಾಗಲಾರದು.

ಇತರ ದೇಶಗಳು ಸುಧಾರಣೆ ಹೊಂ
ದುತ್ತಿರುವ ಈ ಕಾಲದಲ್ಲಿ ಕೊಡಗಿನಲ್ಲಿ
ವಿದ್ಯಾಭ್ಯಾಸವು ಇನ್ನೂ ಶೈಶವಾವಸ್ಥೆಯ
ಲ್ಲಿರುವುದಕ್ಕೆ ಈಗಿನ ಕೊಡಗಿನ ಶಾಲೆಗಳ
ಗಳಲ್ಲಿರುವ ಅಕ್ರಮಗಳೇ ಎಂದು ಭಾವಿಸಿ
ದರೆ ತಪ್ಪಾಗಲಾರದು. ಉದಾಹರಣೆಗಾ
ಗಿ–ಸೋಮವಾರಪೇಟೆ ಹೈಯರ್ ಎಲಿ
ಮೆಂಟರಿ ಶಾಲೆಯಲ್ಲಿರುವ ಸೆಕೆಂಡ್ರಿ ಗ್ರೇಡಿ
ನ ಉಪಾಧ್ಯಾಯರುಗಳು ಕೆಳಗಿನ ತರಗ
ತಿಯಲ್ಲೂ, ಹೈಯರ್ ಎಲಿಮೆಂಟರಿ ಗ್ರೇ
ಡಿನ ಉಪಾಧ್ಯಾಯರು ಮೇಲಿನ ತರಗತಿ
ಯಲ್ಲೂ, ಬರೇ ಪ್ರೈಮರಿ ಇಂಗ್ಲಿಷ್ ಪಾ
ಸಾದ ಉಪಾಧ್ಯಾಯರು ಮೂರನೆ ತರಗ
ತಿಯ ಬಾಲಕರಿಗೆ ಇಂಗ್ಲಿಷ್ ಕಲಿಸುವು
ದು, ಸೆಕೆಂಡ್ರಿ ಗ್ರೇಡ್ ಉಪಾಧ್ಯಾಯರು
ಎರಡನೇ ಕ್ಲಾಸಿಗೆ ಕನ್ನಡ ಪಾಠ ಮಾಡು
ವುದು, ಯಾವುದೋ ಪ್ರೈಮರಿ ಶಾಲೆಯ
ಲ್ಲಿ ಹೈಯರ್ ಎಲಿಮೆಂಟರಿ ಗ್ರೇಡಿನ ಉ
ಪಾಧ್ಯಾಯರಾಗಿದ್ದು ಮತ್ತು ಟ್ರೈನಿಂಗ್
ಸಹ ಆಗಸೆ ಹೈಯರ್ ಎಲಿಮೆಂಟರಿ ಪಾ
ಸಾಗಿರುವ ಉಪಾಧ್ಯಾಯರು ಹೆಡ್ಮಾಸ್ಟರಾ
ಗಿರುವರು. ಕೆಲವು ಶಾಲೆಗಳಲ್ಲಿ ಸೆಕೆಂಡ್ರಿ
ಗ್ರೇಡಿನ ಉಪಾಧ್ಯಾಯರುಗಳ ಕೈಕೆಳಗೆ ಅ
ಸಿಸ್ಟೆಂಟ್ ಮಾಸ್ಟರಾಗಿ ಇಂಟರ್ ಮತ್ತು
ಅಂಡರ್‌ಗ್ರ್ಯಾಜುವೇಟ್ ತೇರ್ಗಡೆಯಾದ ಉ
ಪಾಧ್ಯಾಯರು ಇರುವರು. ಇಂಥಾ ಉ
ಪಾಧ್ಯಾಯರು ಅಸಿಸ್ಟೆಂಟ್ ಉಪಾಧ್ಯಾ
ಯರಾಗಿ ಎಷ್ಟು ಜಿಗುಪ್ಸೆಯಿಂದ ಕೆಲಸ
ಮಾಡಬಹುದೆಂಬುದನ್ನು ತಾವೇ ಊಹಿ
ಸಬೇಕಾಗಿದೆ. ಇವರು ಬರೇ ಮೇಲಾಧಿ
ಕಾರಿಗಳಿಗೆ ಹೆದರಿ ಒಂದು ತರಹದ ಭೀತಿ
ಯಿಂದ ನಡೆಯುತ್ತಿರಬಹುದೇ ಶಿವಾಯಿ
ನಿಜವಾಗಿಯೂ ಆ ಹೆಡ್ ಮಾಸ್ಟರವರ
ಗೌರವ ಭಾವದಿಂದಾಗಲೀ, ಭೀತಿಯಿಂ
ದಾಗಲೀ, ಪ್ರೀತಿಯಿಂದಾಗಲೀ ಸರಿಯಾದ
ಕೆಲಸ ಮಾಡುವವರಾಗಿಲ್ಲವೆಂದೇ ಹೇಳ
ಬೇಕಾಗಿದೆ.

ಆದ್ದರಿಂದ ಈ ಕುಂದುಕೊರತೆಗಳ
ನ್ನು ನಿವಾರಿಸಲು ಸಾಧ್ಯವಾದಷ್ಟು ಹೈ
ಯರ್ ಎಲಿಮೆಂಟರಿ ಶಾಲೆಗಳಿಗೆ ಬಿ. ಎ.,
ಎಲ್. ಟಿ. ಅಥವಾ ಅದಕ್ಕೆ ಸಮಾನವಾ
ದಂಥ ಹೆಡ್ ಮಾಸ್ಟರುಗಳನ್ನು ನೇಮಕ
ಮಾಡಿದರೆ ಮೇಲಿನ ಕೊರತೆಗಳೆಲ್ಲಾ
ಲೋಪವಾಗಿ ಶಾಲೆಯ ಸ್ಥಿತಿಯು ಮತ್ತು
ವಿದ್ಯಾಭಿವೃದ್ಧಿಯೂ ಉತ್ತಮಗೊಳ್ಳುವುದ
ರಲ್ಲಿ ಸಂಶಯವಿಲ್ಲ. ಈ ವಿಷಯವು ಹಿಂ
ದೆ ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ಘನ
ಹೊಂದಿದ ಚೀಫ್ ಕಮಿಷನರವರು ತಕ್ಕ
ನಿಗಾ ಕೊಡುವುದಾಗಿ ಘೋಷಿಸಿದ್ದರೆಂಬುದಾಗಿ ತಿಳಿಯುತ್ತೇವೆ. ಹೈಸ್ಕೂಲು
ಗಳ ಮತ್ತು ಗೌ. ಹೈಯರ್ ಎಲಿಮೆಂಟರಿ
ಸ್ಕೂಲುಗಳು ಒಂದೇ ಇಲಾಖೆಗೆ ಆಗಿರುವುದರಿಂದ ವ
ರ್ಗಾವರ್ಗಿ ವಿಷಯದಲ್ಲಿ ಯಾವ ತೊಂದ
ರೆಯೂ ಇರುವುದಿಲ್ಲ. ಆದ್ದರಿಂದ ಚೀ
ಫ್ ಕಮಿಷನರವರು ಈಗಿನ ಸಿಬ್ಬಂದಿ
ಪೋತೆಯ ಸುಸಮಯದಲ್ಲಿ ಗವರ್ನ್‌ಮೆಂ
ಟ್ ಹೈಯರ್ ಎಲಿಮೆಂಟರಿ ಶಾಲೆಗಳಿಗೆ
ಒಬ್ಬೊಬ್ಬ ಬಿ. ಎ., ಎಲ್. ಟಿ. ಹೆಡ್
ಮಾಸ್ಟರುಗಳನ್ನು ಕೊಡಬೇಕಾಗಿ ಕೇಳಿ
ಕೊಳ್ಳುತ್ತೇವೆ.

'ಮಕ್ಕಳ ತಂದೆ'

Watch! Watch!!

The Grand-day of opening the "HOTEL-DE-COORG"

at the heart of Mercara.

Comfortable Boarding and Lodging in a Spacious Bungalow.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಆದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದೆ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮೂ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ವೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯೊ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿಯಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದ್ದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾ ಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯ ದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟಿದ್ದಾಗಿದೆ.

ವಿಮೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮೂ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವ ವಿಮೂ ಫಂಡು:—ಈ ಕಂಪೆನಿಯ ಜೀವ ವಿಮೂ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಹೋದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮೂ ಕಂತು.	ಜೀವ ವಿಮೂ ಫಂಡು.
1ನೇ ವರ್ಷದ	ರೂ. 1,46,949,	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮೂ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮೂ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಖಾ
ನೂನು ಮೇಕೆ ಠೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿ
ಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಡುವವರಾ
ಗಿರುವರು.

ಸಿ ಯಂ. ತಿಮ್ಮಯ್ಯ,
(52-22) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೧೩.

'ರಸವರಿತು ತಿನ್ನುವುದೂ, ಅಲಂಕಾರವರಿತು ಉಡುವುದೂ ಇದೇ ಮನುಷ್ಯನ ಬಡತನಕ್ಕೆ ಮುಖ್ಯ ಕಾರಣಗಳು. ನಾವು ಹೊಟ್ಟಿಗೂ, ಬಟ್ಟಿಗೂ ಹಣ ವ್ಯಯ ಮಾಡುವುದರಿಂದ ಯಾವುದೊಂದು ಪ್ರಯೋಜನವೂ ಇಲ್ಲ. ಶರೀರ ಮುಚ್ಚುವ ಹಾಗೆ ಸಿಕ್ಕಿದ್ದನ್ನು ಧರಿಸಬೇಕು. ಹಸಿವಡಗುವ ಹಾಗೆ ದೊರಕಿದ್ದನ್ನು ತಿನ್ನಬೇಕು. ರಸಭರಿತವಾದ ಆಹಾರಗಳನ್ನೂ, ಅಲಂಕಾರಯುಕ್ತವಾದ ಬಟ್ಟೆಗಳನ್ನೂ ಉಡುವ ಯೋಚನೆಯು ಯಾರಿಗೂ ಇರಬಾರದು. ಇಂಥಾದ್ದೇ ಆಗಬೇಕೆಂದು ಹೊಟ್ಟೆಯೊಗಲೀ, ಶರೀರವಾಗಲೀ ಕೇಳುತ್ತದೆಯೇನು? ನಾವು ತಿನ್ನುವುದು ಇತರರಿಗ್ಯಾರಿಗೂ ತಿಳಿಯುವುದಿಲ್ಲ. ಅದುದರಿಂದ ನಾವು ಮೃಷ್ಟಾನ್ನವನ್ನೇ ತೆಗೆದುಕೊಳ್ಳಬೇಕೆಂಬ ಅವಶ್ಯವೇನಿರುವುದು? ಇತರರೇನಾದರೂ ನಮ್ಮ ಹೊಟ್ಟೆಯನ್ನು ಸೀಳಿ ನಾವು ಏನು ತಿನ್ನುತ್ತೇವೆಂಬುದನ್ನು ಪರೀಕ್ಷಿಸುತ್ತಾರೆಯೋ. ಅದರ ಬದಲು ಕೈಯಲ್ಲಿ ಸ್ವಲ್ಪ ಹಣವಿದ್ದರೆ ಎಲ್ಲರೂ ಪುರ್ಯಾದೆ ಕೊಡುತ್ತಾರೆ. ಆದುದರಿಂದ ನಾವು ಆಗುನಷ್ಟ ಹೊಟ್ಟೆ ಬಟ್ಟೆಗಳನ್ನು ಕಟ್ಟಿಯೇ ಸಂಪಾದಿಸಬೇಕು. ಯಾವನು ಹಾಗೆ ಸಂಪಾದಿಸುತ್ತಾನೋ ಅವನೇ ಯೋಗ್ಯನು. ಅದರ ಬದಲು ಯಾವನು ಸಂಪಾದಿಸಿದನ್ನೆಲ್ಲಾ ಹೊಟ್ಟೆ ಬಟ್ಟೆಗಾಗಿ ವ್ಯಯ ಮಾಡುತ್ತಾನೋ ಅವನು ಖಂಡಿತವಾಗಿಯೂ ಪರಮ ನೀಚನು. ಇದು ನನ್ನ ಅಭಿಪ್ರಾಯ ಎಂದು' ಧನವಂತ ಪ್ರಸಾದರು ಹೇಳಿ ಹಲ್ಲುಜ್ಜಹೊಡಗಿದರು.

'ನೀವು ಹೇಳಿದ್ದು ತಪ್ಪೆಂದು ಎನ್ನಲಾಗುವುದಿಲ್ಲ. ಆದರೆ ನಾವು ಇಷ್ಟೆಲ್ಲಾ ಮಾಡುವುದು ಯಾವುದರ ಸಲುವಾಗಿ? ಹೊಟ್ಟೆ ಬಟ್ಟೆಗಳಿಗಾಗಿ ಅಲ್ಲವೇ? ಸಂಪಾಸಿ ಅದನ್ನು ತಿನ್ನದೆ ಸಾಯುವುದರಿಂದ ಫಲವೇನು? ಪ್ರತಿಯೊಬ್ಬನೂ ತಾನು ಸಂಪಾದಿಸಿದ ಅರ್ಧವನ್ನಾದರೂ ಹೊಟ್ಟೆ ಬಟ್ಟೆಗಳಿಗೆ ಖರ್ಚು ಮಾಡಬೇಕು. ತನ್ನ ಹೊಟ್ಟೆಯಳಿಗಿಂತಲೂ ವಿಶೇಷ ಖರ್ಚನ್ನು ಯಾರು ಮಾಡಾರದು' ಎಂದು ಹೇಳಿ ಅತಿಥಿಯು ಮುಖ ತೊಳೆಯತೊಡಗಿದನು.

ಧನವಂತ ಯಾರ ಅಭಿಪ್ರಾಯವು ಹೇಗೆ ಇರಲಿ, ನಾನು ಮಾತ್ರ ಉಡುಪಿಗೂ, ಊಟಕ್ಕೂ ಹೆಚ್ಚಾಗಿ ವ್ಯಯ ಮಾಡತಕ್ಕವನಲ್ಲ. ನಿನಗೇನೋ ಆಶ್ಚರ್ಯವಾಗಿ ಕಂಡೀತೆ? ನಾನು ಇಷ್ಟರ ವರೆಗೆ ಒಂದು ದಿವಸವಾದರೂ ಊಟದ ಹೊಟೆಲಿಗೆ ನುಗ್ಗಿದವನಲ್ಲ. ಕಾಫಿ ಹೊಟೆಲುಗಳಲ್ಲಿರತಕ್ಕ ತಿಂಡಿ ಪದಾರ್ಥಗಳ ಪೈಕಿ ನನಗೆ ಗೊತ್ತಿರುವುದು ಖಾರದ ವಡೆ ಒಂದೆ. ಅಕಸ್ಮಾತ್ತಾಗಿ ಯಾರಾದರೂ ನನ್ನನ್ನು ಹೊಟೇಲಿಗೆ ಕರೆದೊಯ್ದಾದರೆ ನಾನು ಮುಟ್ಟುವುದು ಒಂದಾಣೆ ಕಾರ ಮತ್ತು ಒಂದು ಬಟ್ಲು ಕಾಫಿ. — ಇನ್ನು ಅಲ್ಲಿರತಕ್ಕ ಹಲುವ ಮುಂತಾದ ಪದಾರ್ಥಗಳ ರಸ ಹೇಗಿರುತ್ತದೆ ಎಂಬುದನ್ನೇ ನಾನು ತಿಳಿದವನಲ್ಲ. ಅವುಗಳಲ್ಲಿ ನನಗೆ ಅಭಿರುಚಿಯೇ ಇಲ್ಲ. ಮನೆಯಲ್ಲೂ ಸಹ ಅಷ್ಟೆ. ಏನಾದರೂ ಸ್ವಲ್ಪ ಬಿಸಿ ಬಿಸಿ ಸಿಕ್ಕಿದರೆ ಸಾಕು, ರುಚಿ, ಸಪ್ಪೆ ಅವೆಲ್ಲಾ ನನಗೆ ಗಣ್ಯವಿಲ್ಲ. ಉಡುಪಿನಲ್ಲೂ ಹಾಗೆಯೇ. ನಾನು ಮದುವೆಯಾಗುವಾಗ್ಯೆ ನನಗೆ ಇದ್ದದ್ದು ಒಂದೇ ಒಂದು ಕೋಟು. ಮದುವೆಯಾದನಂತರ ಕೋರ್ಟು ಖರ್ಚೇರಿಗಳಿಗೆ ವ್ಯಾಜ್ಯ ಸಾಜ್ಯಗಳಿಗೆ ಹೋಗಲು ಪ್ರಾರಂಭಿಸುವ ವರೆಗೆ ನಾನು ಶರಾಯಿ ಧರಿಸಿದವನಲ್ಲ. ಆ ಮೇಲೆ ನನ್ನ ಕೆಲವು ಸ್ನೇಹಿತರ ವತ್ತಾಯದ ಮೇರೆ ಎರಡು ಅಮೂಲ್ಯವಾದ ಎಂದರೆ ಗಜಕ್ಕೆ ಎರಡುವರೆ ರೂಪಾಯಿ ಬೆಲೆ ಬಾಳುವ ಕೋಟುಗಳನ್ನು ಹೊಲಿಸಿದೆನು. ಅವು ಈಗಲೂ ಇವೆ. ಸುಮಾರು ಇಪ್ಪತ್ತು ವರ್ಷವಾಗಿರಬಹುದು. ನನಗೆ ಸುಮಾರು ಅರುವತ್ತು ವರ್ಷ ಪ್ರಾಯವಿದೆ. ಬಟ್ಟೆ ಬರೆಗಳಿಗೆ ನಾನು ಇಷ್ಟರ ವರೆಗೆ ವ್ಯಯ ಮಾಡಿದ್ದು ಅಮ್ಮಮ್ಮಾ ಎಂದರೆ ಇನ್ನೂರು ರೂ. ಗಳಿಗೆ ಮಿಂಚಲಾರದು'.

ನಂಟರು ನಸುನಗೆಯಿಂದ ಶಿರ ಸಂಧಾನ ಮಾಡಿದರು, ಧನವಂತ ಪ್ರಸಾದರು ವಿಭೂತಿ ತೆಗೆದುಕೊಂಡು ಶಿವಪೂಜೆಗೆ ಕುಳಿತರು.

ಇವರು ಕೋಳಿ ಮಾಂಸ ಮುಟ್ಟುತ್ತಿರಲಿಲ್ಲ. ಅತಿಥಿಗಳ ಸತ್ಕಾರಕ್ಕಾಗಿ ಗೃಹಿಣಿಯು ಒಂದು ಕೋಳಿಯನ್ನು ಪಕ್ವ ಮಾಡಿದ್ದಳು. ತಮ್ಮ ಯಜಮಾನರಿಗೋಸ್ಕರ ಸ್ವಲ್ಪ ತೆಂಗಿನಕಾಯಿ ಚಟ್ನಿಯನ್ನು ತಯಾರಿಸಿದ್ದಳು. ಅದನ್ನೆಲ್ಲಾ ಬಟ್ಲುಗಳಿಗೆ ಹಾಕಿ ಅಡಿಗೆ ಮನೆಯಲ್ಲಿ ಮೇಜಿನ ಮೇಲೆ ಅವರು ಫಲಾಹಾರಕ್ಕೆ ಕುಳಿತೊಡನೆ ಇವೆಲ್ಲವನ್ನು ಅವರ ಮುಂದೆ ಇಡು ಎಂಬದಾಗಿ ತನ್ನ ನಾದಿನಿಗೆ ಹೇಳಿದನಂತರ ಪತ್ನಿಯು ವನ ಬಿಡಲು ಕೊಟ್ಟಿಗೆಗೆ ಹೋದಳು. ಅಷ್ಟರಲ್ಲಿ ಧನವಂತ ಪ್ರಸಾದರ ಪೂಜೆಯು ತೀರಿ, ಅವರು ನಂಟರೊಡನೆ ನಡುಮನೆಯಲ್ಲಿ ಫಲಹಾರಕ್ಕೆ ಕುಳಿತರು. ಯುವತಿಯು ರೊಟ್ಟಿಯನ್ನೂ, ಪಕ್ವ ಮಾಡಿದ ಮಾಂಸವನ್ನೂ ನಂಟರ ಎಮ್ಮಂನಲ್ಲಿಟ್ಟು ಮತ್ತೊಂದು ಬಟ್ಟಲನ್ನು ಪ್ರಸಾದರ ಎದುರಿನಲ್ಲಿಡಗಿದಳು.

ಪ್ರಸಾದರು–'ನಾನು ಕೋಳಿ ಮಾಂಸ ಮುಟ್ಟುವುದಿಲ್ಲವಾದ ಕಾರಣ ನನಗೆ ಚಟ್ನಿ ತಯಾರಿಸಿದ್ದಾಗಿದೆ. ಇನ್ನೇನು? ಫಲಹಾರ ಮಾಡುವ' ಎಂದು ಹೇಳಿ ಪ್ರಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿ ಗೃಹಿಣಿಯು ಒಳಗೆ ಪ್ರವೇಶಿಸಿ, 'ಏನು, ಮಗೂ! ನಿಮ್ಮ ಅಣ್ಣನವರಿಗೆ ಚಟ್ನಿ ಹಾಕಲಿಲ್ಲವೋ? ಎಂದು ಆ ಹುಡುಗಿಯನ್ನು ಕೇಳಿದಳು. 'ಇಟ್ಟಿರುತ್ತೇನೆ, ಅತ್ತಿಗೆ' ಎಂದು ಹುಡುಗಿಯು ಮರು ನುಡಿದಳು. 'ಛೀ ಚಟ್ನಿ ಹಾಕಿದ ಬಟ್ಲು ಇಟ್ಟಲ್ಲೇ ಇದೆ, ನೀನು ಮಾಡಿದ್ದು ಏನು? ನೀನು ಚಟ್ನಿ ಎಂದು ಮಸಾಲೆ ಕಡಿಮೆಯನ್ನು ಹಾಕಿದೆಯಲ್ಲಾ? ಈಗ ಮಾಡುವುದೇನು?'

ಬಾಲೆಗೆ ಬಗ್ಗನೆ ನಗು ಬಂತು. ಅವಳು ಅತೀ ಕಷ್ಟದಿಂದ ನಗೆಯನ್ನು ಸಹಿಸಿಕೊಂಡು ನಡುಮನೆಗೆ ಬಂದು ನೋಡುವಾಗ ಧನವಂತರು ನೆಂಟರೊಡನೆ ಮಾತಾಡುತ್ತಾ ಮಸಾಲೆಯ ಅರ್ಧ ಮುಗಿಸಿಬಿಟ್ಟಿದ್ದರು. ಸ್ವಲ್ಪ ಹೊತ್ತಿನಲ್ಲಿ ಏನೋ ದೂ ಅಡಚಣೆ ಇಲ್ಲದೆ ಫಲಹಾರವು ಮುಗಿಯಲು ಇಬ್ಬರು ಕೈ ತೊಳೆದು ಬಂದು ಹೊರಗೆ ಕುಳಿತರು. ಅಷ್ಟರಲ್ಲಿ ಟಪ್ಪಾಲಿನವನು ಲಕೋಟೆಯೊಂದನ್ನು ತಂದು ಧನವಂತರಿಗೆ ಕೊಟ್ಟನು. ಕೂಡಲೆ ಅವರು ಅದನ್ನು ಒಡೆದು ಓದಲಾರಂಭಿಸಿದರು.

'ಪ್ರಿಯ ತಂದೆಯವರಿಗೆ–ನಾನು ಕ್ಷೇಮ. ನಿಮ್ಮ ಕ್ಷೇಮವನ್ನು ತಿಳಿದು ಸಂತೋಷವಾಯಿತು. ತಾಯಮ್ಮನವರಿಗೆ ಈ ಕಾಗದವನ್ನು ತೋರಿಸುವುದು. ನಮ್ಮ ಪರೀಕ್ಷೆಯು ನಾಳೆಗೆ ಕೊನೆಗಾಣುವುದು. ಆ ಮೇಲೆ ನಮಗೆ ಎರಡು ವಾರ ರಜೆ ಇವೆ. ನಾವು ಕೆಲವು ವಿದ್ಯಾರ್ಥಿಗಳು ರೇವೆ ಪಟ್ಣಕ್ಕೆ ಪ್ರಯಾಣ ಮಾಡಲು ಏರ್ಪಾಡು ಮಾಡಿರುತ್ತೇವೆ. ಆದುದರಿಂದ ನೀವು ಈ ಕಾಗದ ಕಂಡ ಒಡನೆ ನೂರು ರೂಪಾಯಿಗಳನ್ನು ತಂತಿಯ ಮೂಲಕ ಕಳುಹಿಸಿಕೊಡತಕ್ಕದ್ದು. ತಪ್ಪಿದರೆ ಬಹು ತೊಂದರೆಗೀಡಾಗುವೆವು. ಹಣ ಸಿಗುವ ಭರವಸೆಯಿಂದ ಪ್ರಯಾಣಕ್ಕೆ ಬೇಕಾದ ಸರಂಜಾಮುಗಳನ್ನೆಲ್ಲಾ ಕೊಂಡು ಕೊಂಡಿರುತ್ತೇನೆ. ಆದುದರಿಂದ ಒಡನೆ ಕಳುಹಿಸುವುದು.

ಇಂತಿ, ಆನಂದಪ್ರಸಾದ.

"ನಾನಾಡುವುದೆಲ್ಲಾ ಬುದ್ಧಿವಂತಿಕೆಯ ಮಾತು ಆದರೆ ನನಗೊಬ್ಬ ಕುಮಾರನು ಜನಿಸಿರುತ್ತಾನೆ; ಅವನು ಹುಟ್ಟಿದ್ದೇ ನಾವು ಗಳಿಸಿದ್ದನ್ನೆಲ್ಲಾ ಹಾಳು ಮಾಡುವುದಕ್ಕೆ. ಪ್ರತಿ ರಜೆಯಲ್ಲಿಯೂ ಹೀಗೆಯೇ ಮನೆಗೆ ಬರುವುದೇ ಇಲ್ಲ. ಇಲ್ಲಿ ಬಂದರೆ ಅವನಿಗೆ ತನ್ನ ತಂಡಿತೀರ್ಥಗಳೇ ಒಗ್ಗುವುದಲ್ಲವಂತೆ! ಅಯ್ಯೋ! ಅವನ್ನ ಉಡುಪು ಏನು! ಶೋಕಿ ಏನು! ಇಷ್ಟಕ್ಕೆಲ್ಲಾ ವಿದ್ಯೆಯಲ್ಲಾದರೂ ಸರಿಯಾಗಿ ತೇರ್ಗಡೆಯಾಗುತ್ತಾ, ಜಿರ್ದಿದ್ದರೆ, ಅದಾವದೊ೦ದು; ಅದೂ ಇಲ್ಲ. ಈಗ ಇದೇ ಕ್ಲಾಸಿನಲ್ಲಿ ಮೂರು ಸರ್ತಿಗಳಾದವು. ಪ್ರತಿ ತಿಂಗಳೂ ಹೀಗೆಯೇ 'ಹಣ, ಹಣ'ವೆಂದು ಬರೆಯುತ್ತಾನೆ. ನನಗೇನು ಈಗಿನ ವಿದ್ಯಾಭ್ಯಾಸದ ಕ್ರಮವೇ ಗೊತ್ತಿರುವದಿಲ್ಲ; ಕಲಿಯವುದು ಬರೇ ಮೆಟ್ರಿಕೆಯಲ್ಲಿ. ಐವತ್ತು ರೂಪಾಯಿಗಳ ಪುಸ್ತಕಗಳನ್ನು ಕೊಂಡುಕೊಂಡಿರುವನಂತೆ. ಪ್ರತಿ ಪರೀಕ್ಷೆಗೂ ಐದು ರೂಪಾಯಿ ಕೊಡಬೇಕಂತೆ. ಏನೇನೋ ಕಾರ್ಡು ಬರೆಯುತ್ತಾನೆ. ನನಗೇನೂ ತಿಳಿಯದು, ಏನು ಮಾಡುವುದು ಕಳುಹಿಸದಿದ್ದರೆ ಅದೂ ಆಗುವುದಿಲ್ಲ. ಹೇಗಾದರೂ ಮಾಡಿ ಆತನನ್ನು ವಿದ್ಯೆಯಲ್ಲಿ ಆಗುವಷ್ಟು ಮುಂದಕ್ಕೆ ತರಬೇಕೆಂದು ಏಶ್ವ ಪ್ರಯತ್ನ ಮಾಡಿದೆನು. ಇಲ್ಲಿ ಕಲಿಯಲಿಕ್ಕೆ ಆಗುವದಿಲ್ಲವೆಂದು ರಾಜಧಾನಿಗೆ ಕಳುಹಿಸಿದ್ದಾಯಿತು. ಅಲ್ಲಿಯೂ ಸಹ ಅವನು ಅಭಿವೃದ್ಧಿ ಹೊಂದುವವನ ಹಾಗೆ ಕಾಣುವುದಿಲ್ಲ.' ಎಂದು ಹೇಳಿ ಧನವಂತ ಪ್ರಸಾದನು ಬೆಲವಾಗಿ ನಿಟ್ಟುಸಿರು ಬಿಟ್ಟನು.

ಅತಿಥಿ:–'ಅಯ್ಯೋ! ನಾನೇನು ಬಹು ವಿದ್ಯಾವಂತನಲ್ಲ. ವಯಸ್ಸಿನಲ್ಲೂ, ವಿದ್ಯೆಯಲ್ಲೂ ನಿಮಗಿಂತಲೂ ಕೇಳೇ ಇದ್ದೀನೆ. ಆದರೂ ನನ್ನದೊಂದು ಅಭಿಪ್ರಾಯವೇನೆಂದರೆ ಮಕ್ಕಳ ಮಹತ್ವಕ್ಕೂ, ಹೀನತ್ವಕ್ಕೂ ತಂದೆ ತಾಯಿಗಳೇ ಕಾರಣರು. ಅನೇಕ ತಂದೆ ತಾಯಿಗಳಿಗೆ ತಮ್ಮ ಮಕ್ಕಳನ್ನು ಹೇಗೆ ಸಲಹಬೇಕೆಂಬ ವಿಧಾನವ್ನೆ ಗೊತ್ತೇ ಇರುವುದಿಲ್ಲ. ಹುಟ್ಟಿದಾಕ್ಷಣವೇ ಅವರ ಮೇಲೆ ತಮಗಿಂತಕ್ಕ ಅರ್ಥವಿಲ್ಲದ ಪ್ರೀತಿಯನ್ನು ತೋರಿಸುತ್ತಾ ತಮ್ಮ ಮಕ್ಕಳನ್ನು ನಾನಾ ಪರಹದ ದುರ್ನಡತಾ ಪ್ರವರ್ತಿಗಳನ್ನಾಗಿ ಮಾಡುತ್ತಾರೆ.

ಕೆಲವು ತಂದೆ ತಾಯಿಗಳು ಸಣ್ಣ ಮಕ್ಕಳಿಗೆ ತಾವು ವಾಡಿಕೆಯೊಗಿ ಉಸಯೋಗಿಸಿದ ಆಹಾರ ಪದಾರ್ಥಗಳನ್ನು ಕ್ರಯಕ್ಕೆ ತಂದುಕೊಡುತ್ತಾರೆ. ಆ ಪರಹದ ನವೀನ ಆಹಾರಗಳಲ್ಲೇ ಬೆಳೆದ ಮಕ್ಕಳು ಸ್ವಲ್ಪ ದೊಡ್ಡವರಾದ ಮೇಲೆ ತಮ್ಮ ವಾಡಿಕೆಯ ಆಹಾರವನ್ನು ಸೇರಿಸತೊಡಗಲು ಅವು ಅವರ ಶರೀರಕ್ಕೆ ಸರಿಬೀಳದೆ ನಾನಾ ಕಾಯಿಲೆಗಳಿಗೂ, ಬಲಹೀನತ್ವಕ್ಕೂ ಗುರಿಯಾಗುತ್ತಾರೆ. ಇದಕ್ಕೆ ತಂದೆ ತಾಯಿಗಳ ಅರ್ಥವಿಲ್ಲದ ಪ್ರೀತಿಯಲ್ಲದೆ ಬೇರೆ ಕಾರಣವಿದೆಯೇ?

'ಇನ್ನು ಕೆಲವು ತಂದೆ ತಾಯಿಗಳು ತಾವು ಸೇವಿಸುವ ಪ್ರತಿ ಒಂದು ಪದಾರ್ಥವನ್ನು ತಮ್ಮ ಮಕ್ಕಳಿಗೆ ಕೊಡುತ್ತಾರೆ. ಅದರಿಂದ ಮಕ್ಕಳ ಆರೋಗ್ಯವನ್ನು ಹಾಳು ಮಾಡುವುದಲ್ಲದೆ, ಅವರನ್ನು ದುರ್ನಡತೆಗಳಿಗೂ, ದುರ್ಗುಣಗಳಿಗೂ ಆಶ್ರಯವನ್ನಾಗಿ ಮಾಡುತ್ತಾರೆ. ಹೆಂಡ, ಸಾರಾಯಿ ಮೊದಲಾದ ಮಾದಕ ಪದಾರ್ಥಗಳ ಸೇವನೆಯಲ್ಲಿ ತಮ್ಮ ಜೀವನವನ್ನೇ ತೋಚನೀಯವನ್ನಾಗಿ ತಂದುಕೊಂಡಿರುವ ತಾಯಿ ತಂದೆಗಳೂ ಕೂಡ ತಾವು ಕುಡಿದು, ಆದೆಷ್ಟಬಟ್ಟಲಲ್ಲಿ ಸ್ವಲ್ಪ ಮಿಗಿಸಿ, ಅದನ್ನು ತಮ್ಮ ಎಳೇ ಮಕ್ಕಳಿಗೆ ಕುಡಿಸುತ್ತಾರೆ. ಇದು ಮಾಡುವುದು ಸಹ ಮಕ್ಕಳ ಮೇಲೆ ತಮಗಿರುವ ಪ್ರೀತಿಯ ಸಲುವಾಗಿ; ಇದೇ ಅಭ್ಯಾಸದಿಂದ ಆ ಮಕ್ಕಳೆ ಮುಂದೆ ಕುಡುಕರಾಗಿ ತಮ್ಮ ತನು, ಧನ, ಮಾನ ಮರ್ಯಾದೆಗಳನ್ನು ಕಳೆದುಕೊಂಡರೆ ಇಂತಹ ಮಾತಾ ಪಿತೃಗಳು ತೋರಿಸುವ ವಾತ್ಸಲ್ಯವು ಮಮತೆಯೋ ಅಲ್ಲ ಯಮತೆಯೋ?

'ಇನ್ನು ಕೆಲವರು ತಮ್ಮ ಎಳೇ ಮಕ್ಕಳು ತೊದಲ್ನುಡಿಗಳಾಡಲು ತೊಡಗಿದರೆಂದರೆ ಅವರಿಗೆ ಅಯೋಗ್ಯವಾದ ಕೆಲವು ಕೀಳು ನುಡಿಗಳನ್ನೂ, ಅಪಶಬ್ದಗಳನ್ನೂ ಮತ್ತು ಅಹಂಕಾರದ ಮಾತುಗಳನ್ನೂ ಕಲಿಸುವುದಲ್ಲದೆ ಅತಿಥಿಗಳೋ, ಅಲ್ಲ ಸ್ನೇಹಿತರೋ ತಮ್ಮ ಮನೆಗೆ ಬಂದರೆಂದರೆ ತಾವು ಕಲಿಸಿದ ಕೀಳು ನುಡಿಗಳಿಂದ ಅವರನ್ನು ಬಯಿಸಿ ಆದರಲ್ಲಿ ತೃಪ್ತಿ ಹೊಂದುತ್ತಾರೆ. ಇಂತವರು ಮಕ್ಕಳ ಹಿತಚಿಂತಕರೋ ಅಥವಾ ಅವರ ಅನಾಹುತಕ್ಕೆ ಕಾರಣರೋ ನೀವೆ ಹೇಳಿ.'

[ಸಶೇಷ.]

ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ವಿಚಾರಗಳು.

ಶ್ರೀ ಕಾಕಮಾಡ ಗಣಪತಿಯವರ ಠರಾವುಗಳು.

25. (1) ಹುದಿಕೇರಿ ಸರ್ಕೀಟಿನಲ್ಲಿ ಸರ್ಕೀಟ್ ಕಟ್ಟಡಕ್ಕೆ ಜಂಟಿಸಿರುವ ಜಿಂಕಿನ ತಗಡುಗಳನ್ನು ತೆಗೆದುಬಿಡಬೇಕೆಂದು ತೀರ್ಮಾನಿಸಲಾಯಿತು.

(2) ಡಿ. ಬೋರ್ಡಿನ ಲೈಸೆನ್ಸು ಪಡೆದಿರುವ ಎಲ್ಲಾ ಅಂಗಡಿಗಳನ್ನೂ, ಹೊಟೇಲುಗಳನ್ನೂ ಸಂದರ್ಶಿಸಿ ಅವುಗಳ ಶುಚಿತ್ವದ ವಿಚಾರ ರಿಪೋರ್ಟು ಮಾಡುವ ಅಧಿಕಾರ ಬೋರ್ಡಿನ ಮೆಂಬರುಗಳಿಗೆ ಕೊಡುವಂತೆ ತೀರ್ಮಾನವಾಯಿತು.

(3) ಕೊಡಗಿನ ಶಾಲೆಗಳಿಗೆ ಬೇಕಾದ ಪಠ್ಯ ಪುಸ್ತಕಗಳನ್ನು ಚುನಾಯಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ಪಾಸಾದ ಠರಾವನ್ನು ಆಗುವಷ್ಟು ಬೇಗನೆ ಜಾರಿಗೆ ತರಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

(4) ಒಂದೇ ಶಾಲೆಯಲ್ಲಿ 8 ವರ್ಷಗಳಿಗಿಂತ ಹೆಚ್ಚು ಸರ್ವಿಸಿನಲ್ಲಿದ್ದ ಉಪಾಧ್ಯಾಯರುಗಳನ್ನು ಈ ವರ್ಷ ಬೇರೆ ಕಡೆ ವರ್ಗಾಯಿಸಬೇಕೆಂದು ಬಹುಮತದಿಂದ ಪಾಸಾಯಿತು.

ಇಷ್ಟರಲ್ಲಿ ಎಕ್ಸೈಸ್ ಎಡ್ವೈಸರಿ ಮೀಟಿಂಗಿಗೆ ಹೋಗಿದ್ದ ಮೆಂಬರುಗಳು ವಾಪಸು ಬಂದು ಬೋರ್ಡಿನ ಪ್ರೆಸಿಡೆಂಟರು ಅಧ್ಯಕ್ಷಸ್ಥಾನವನ್ನು ಪರಿಹಸಿಕೊಂಡರು.

(5) ಮದ್ರಾಸು ಲೋಕಲ್ ಬೋರ್ಡಿನ ಆಸ್ಟ್ ಮೇರೆ ಡಿಸ್ಟ್ರಿಕ್ಟ್ ಫಂಡು ಮ್ಯಾನ್ಯುವಲನ್ನು ತಿದ್ದುಪಡಿ ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರವು ಕರಡು ನಿಯಮವನ್ನು ತಯಾರಿಸುವ ಮೊದಲು ಪ್ರೆಸಿಡೆಂಟರ ಮತ್ತು ವೈಸ್‌ಪ್ರೆಸಿಡೆಂಟರ ಸಲಹೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳಲು ತೀರ್ಮಾನವಾಯಿತು.

(6) ಹುದಿಕೇರಿಯ ಈಗಿನ ವಾರದ ಆಸ್ಪತ್ರೆಯನ್ನು ಖಾಯಂ ದೈನಿಕ ಆಸ್ಪತ್ರೆಯಾಗಿ ಮಾಡಬೇಕೆಂಬ ಠರಾವು ವಾಪಾಸು ತೆಗೆಯಲ್ಪಟ್ಟಿತು.

(7) ಬಿಟ್ಟಂಗಾಲದಿಂದ ಕೂಟಿಯೂಲ ಹೊಳೆಗೆ ಹೋಗುವ ರಸ್ತೆಯಲ್ಲಿರುವ ದಿಣ್ಣೆಗಳನ್ನು ತೆಗೆಸಲು ರೂ. 50 ಹೆಚ್ಚಿನ ಗ್ರಾಂಟು ಕೊಡಬೇಕೆಂಬ ಠರಾವು ವಾಪಾಸು ತೆಗೆದುಕೊಳ್ಳಲ್ಪಟ್ಟಿತು.

26. ಡಿ. ಬೋರ್ಡಿನ 1937-38ರ ಆಡಿಟ್ ವರದಿಯ ನಕಲನ್ನು ಎಲ್ಲಾ ಮೆಂಬರುಗಳಿಗೂ ಸರಬರಾಯಿ ಮಾಡಲು ತೀರ್ಮಾನವಾಯಿತು.

ಶ್ರೀ ಎ. ಯಸ್. ಮಾಚಯ್ಯನವರ ಠರಾವುಗಳು.

27. ಕೊಡಗಿನ ಡಿಸ್ಟ್ರಿಕ್ಟ್ ಬೋರ್ಡಿನ ಈಗಿರುವ ಸ್ಥಿತಿಯ ಆಡಳಿತವು ಬೇರೆ ಬೋರ್ಡುಗಳು ಜನತೆಗೆ ಕೊಡುತ್ತಿರುವ ಸಲಕರಣೆಗಳನ್ನೊಳಗೊಳ್ಳದೆ, ಜನರಿಗುಪಯುಕ್ತವಾದ ಕೆಲಸ ಮಾಡಲು ಆಸ್ಪದವಿಲ್ಲದೆ ಪೂರಾ ಅತೃಪ್ತಿಕರವಾದ್ದರಿಂದಲೂ, ಡಿ. ಬೋರ್ಡು ಹೀಗೇ ಇರುವುದರಿಂದ ಅಭಿವೃದ್ಧಿ ಹೊಂದಲು ಅವಕಾಶವಿಲ್ಲದ ಪ್ರಯುಕ್ತ, ಕೊಡಗು ಪ್ರಾಂತವನ್ನು ಜನತೆಯ ಉನ್ನತಿಗಾಗಿಯೂ, ಡಿ. ಬೋರ್ಡಿಗೆ ಹೆಚ್ಚಿನ ಅಧಿಕಾರಗಳನ್ನು ಕಲ್ಪಿಸುವ ಬಗ್ಗೆಯೂ, ಮದ್ರಾಸಿನಿಂದಗೆ ಸೇರಿಸಬೇಕೆಂದೂ, ಇದರಿಂದ ಕರ್ನಾಟಕ ಪ್ರಾಂತರ ಜನತೆಯ ಸಮಸ್ಯೆಯು ತೀವ್ರಗೊಳ್ಳುತ್ತದೆಂದೂ ತಂದ ಠರಾವನ್ನು ವಾಪಸು ತೆಗೆದುಕೊಂಡರು.

28. (2) ಲೋಕಲ್ ಫಂಡ್ ಆಸ್ಪತ್ರೆಗಳ ಸಬ್ ಅಸಿಸ್ಟೆಂಟ್ ಸರ್ಜನರುಗಳನ್ನು ಒಂದೇ ಆಸ್ಪತ್ರೆಯಲ್ಲಿ ಮೂರು ವರ್ಷಗಳ ಮೇಲೆ ಇಡಬಾರದೆಂಬ ಠರಾವು ನುಂಜೂರಾಯಿತು.

29. ಕೊಡಗು ಡಿ. ಬೋರ್ಡಿನ ವಿವಿಧ ಇಲಾಖೆಗಳ ನೌಕರರಿಗೆ ಪಿಂಚಣಿ ಸಂಬಳದ ದರವನ್ನು ಕೊಡಬೇಕೆಂಬ ವಿಚಾರದ ಚೀಫ್ ಕಮಿಷನರ ಸೆಕ್ರೆಟರಿಯ ಪತ್ರವನ್ನು ಇನ್ನೊಂದು ಮೀಟಿಂಗಿಗೆ ಮುಂದರಿಸಿಡಲಾಯಿತು.

30. ಗ್ರಾಮಾಂತರಗಳಲ್ಲಿ ಸಾಕಲ್ಪಡುವ ನಾಯಿಗಳ ಮೇಲೆ ರೂ. 3 ರಂತೆ ಕಂದಾಯ ವಿಧಿಸಬೇಕೆಂಬ ಶ್ರೀ ಜೆ. ಬಿ. ಹೆಚ್. ಮೂರಿಸರವರ ಠರಾವನ್ನು ಪ್ರೆಸಿಡೆಂಟರು, ಫೈಸ್ ಪ್ರೆಸಿಡೆಂಟರು, ಅಸಿಸ್ಟೆಂಟ್ ಕಮಿಷನರು, ಡಿ. ಇನ್ಸ್‌ಪೆಕ್ಟರು, ಶ್ರೀ ಗಳಾದ ಸಿ. ಯಂ. ಪೂಣಚ್ಚನವರು, ಕಾಕಮಾಡ ಗಣಪತಿಯವರು ಮತ್ತು ಹೆಚ್. ಯಂ. ಪುಷ್ಪಣ್ಣನವರಿಂದ ಕೂಡಿದ ಕಮಿಟಿಯ ವಿಮರ್ಶೆಗೆ ಬಿಡಲಾಯಿತು.

31. ಆಲೂರು ಶಾಲೆಯನ್ನು ಮುಚ್ಚಬೇಕೆಂಬ ಪಶ್ನೆಗಳನ್ನೆಲ್ಲಾ ಓದಿ, ಬರುವ ಮೀಟಿಂಗಿಗೆ ಮುಂದೆಹಾಕಿಡಲ್ಪಟ್ಟಿತು.

32. ಸಿದ್ದಾಪುರದ ಹಳೇ ಸರ್ಕೀಟ್ ಕಂಟ್ರಾಕ್ಟರ್ ಶ್ರೀ ಶಿವಾಚಾರ ರುದ್ರಪ್ಪನವರಿಂದ ಬರತಕ್ಕದ್ದಿರುವ ಏಪ್ರಿಲ್ 10ರಿಂದ ಆಕ್ಟೋಬರ್ 13ರ ವರೆಗಿನ ಕಂತು ಹಣ ವಸೂಲಾತಿ ಬಗ್ಗೆ ಕಾನೂನಿನುಸರಿಸಿಯುಕ್ತ ಕಂಡ ರೀತಿ ಕ್ರಮಜರುಗಿಸಲು ಪ್ರೆಸಿಡೆಂಟರಿಗೆ ಅಧಿಕಾರ ಕೊಡಲಾಯಿತು.

ಶ್ರೀ ಮಂಡೇಸಂಡ ಸೋಮಯ್ಯನವರ ಠರಾವುಗಳು.

33. (1) 20 ವರ್ಷಗಳ ಸರ್ವಿಸು ಮಾಡಿದ ಉಪಾಧ್ಯಾಯರಿಗೆ ಟ್ರೈನಿಂಗಿನ ಆವಶ್ಯಕತೆ ಇಲ್ಲವೆಂಬ ಠರಾವು ವಾಪಾಸು ತೆಗೆದುಕೊಳ್ಳಲ್ಪಟ್ಟಿತು.

34. ಚೀಫ್ ಕಮಿಷನರಿಗೆ ಡೆಪ್ಯುಟೇಶನ್ ಹೋಗಿದ್ದವರ ಪ್ರಯಾಣ ಬತ್ಯವನ್ನು ತೆಗೆದುಕೊಳ್ಳಲು ಬೋರ್ಡು ಮಂಜೂರು ಮಾಡಿದ ಠರಾವಿನ ನಕಲನ್ನು ಕೊಡಬೇಕೆಂಬ ಮದ್ರಾಸು ಎಕೌಂಟೆಂಟ್ ಜನರಲ್‌ರವರ ಪತ್ರ ಮೇರೆ ಅದನ್ನು ಕೊಡಲು ತೀರ್ಮಾನಿಸಿತು.

35. ಶನಿವಾರಸಂತೆ ದನಗಳ ಜಾತ್ರೆಗೆ ರೂ. 50 ನ್ನೂ, ನಾಪೋಕ್ಲಿನ ಜಾತ್ರೆಗೆ ರೂ. 25 ನ್ನೂ ಮತ್ತು ಫ್ರೇಜರ್‌ಪೇಟೆಯ ಸೀತಾಪುರ ದನಗಳ ಜಾತ್ರೆಗೆ ರೂ. 10 ನ್ನೂ ಮಂಜೂರುಮಾಡಿದ್ದಲ್ಲದೆ, ವರ್ಷಾವಧಿ ಕೊಡುತ್ತಿರುವ ಗ್ರಾಂಟನ್ನು ಬೇರೆ ಜಾತ್ರೆಗಳಿಗೂ ಕೊಡಲು ಪ್ರೆಸಿಡೆಂಟರಿಗೆ ಅಧಿಕಾರ ಕೊಡಲಾಯಿತು.

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೫೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೪೫೮—೧೫—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೪೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೬೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-8

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ. 29-10-38 ರಲ್ಲು ಆಪರಾನ್ಹ 1-30 ಕ್ಕೆ ಶ್ರೀಮಾನ್ ಪಂಚ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು.

ಮೆ. ಗಳಾದ 1. ಪಂಚ್ಯಂಡ ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ಕೊಳ್ಳಿಮಾಡ ಕರುಂಬೈಯ್ಯನವರು, 3. ಐನಂಡ ಕಾರ್ಯಪ್ಪನವರು, 4. ಚೀಯಕಪೂವಂಡ ಭೀಮಯ್ಯನವರು, 5. ರಾ. ಬಾ. ಪಟ್ಟಮಾಡ ದೇವಯ್ಯನವರು 6. ಮನೆಯಪಂಡ ಬೆಳ್ಯಪ್ಪನವರು 7. ಚೌರಿರ ಮಂದಣ್ಣನವರು, (ಟ್ರೆಜರರ್) 8. ಪುತ್ತಮನೆ ಮುದ್ದಮೈಯ್ಯನವರು, 9. ಮಡೆಯಂಡ ದೇವಯ್ಯನವರು, 10. ಮಂಡೇಪಂಡ ಸೋಮಯ್ಯನವರು, 11. ಹೆಚ್. ಯಂ. ಪುಷ್ಪಣ್ಣನವರು, 12. ಬಲ್ಲಚಂಡ ಬೆಳ್ಯಪ್ಪನವರು, 13. ಐಚೆಟ್ಟಿರ ಸುಬ್ಬೈಯ್ಯನವರು, ಮತ್ತು 14. ಪುಲಿಯಂಡ ಐಯ್ಯಪ್ಪನವರು (ಗೌರವ ಕಾರ್ಯದರ್ಶಿ.)

ಸಹಕಾರಿ ಸಂಘಗಳ ರಿಜಿಸ್ಟ್ರಾರವರೂ ಸೀನಿಯರ್ ನಾನ್ ಕ್ರೆಡಿಟ್ ಇನ್ಸ್‌ಪೆಕ್ಟರರೂ ಸಹ ಹಾಜರಿದ್ದರು.

ದಿವಾನ್ ಬಹದೂರ್ ಕೇಟೋಳಿರ ಚಂಗಪ್ಪನವರು ಗೈರಾಜರಾಗಿದ್ದರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಡೆಪ್ಯೂಟೇಶನ್ ಬೋರ್ಡಿನ ಕಳೆದ ಮೀಟಿಂಗುಗಳ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು

3. ಕಳೆದ ಆಗೋಸ್ತು ಮತ್ತು ಸೆಪ್ಟಂಬರ್ ತಿಂಗಳುಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ಆಗಸ್ಟ '38.

ಹಿಂದಳತಿಂಗಳ ಶಿಲ್ಕು	8655	13	8
ಈ ತಿಂಗಳ ಜಮ	24,670	9	4
ಜುಮ್ಲ	33,326	7	0
ಸದರಿ ತಿಂಗಳ ಖರ್ಚು	19,127	4	1
ತಿಂಗಳಂತ್ಯದ ಶಿಲ್ಕು	14,199	2	11

ಸೆಪ್ಟಂಬರ್ '38.

ಹಿಂದಳ ಶಿಲ್ಕು	14,199-2-11
ಸದರಿ ತಿಂಗಳಲ್ಲಿ ವಸೂಲಿ	36,245-7-0
ಜುಮ್ಲ	50,444-9-11
ಆ ತಿಂಗಳಲ್ಲಿ ಖರ್ಚು	34,650-1-0
ಬಾಕಿ ಶಿಲ್ಕು	15,794-8-11

4. ಬ್ಯಾಂಕಿನ ಮೂಜಿ ಸೆಕ್ರೆಟರಿಯವರಾದ ಮೆ. ಯಂ. ಯಂ. ಬೆಳ್ಯಪ್ಪನವರು ಹೊಂದಿಕೊಂಡ ಬೋನಸ್ ಮೊಬಲಗನ್ನು ವಾಪ್ಸು ಪಡಿಸುವ ವಿಷಯ ವಿಮರ್ಶಿಸಲಿಕ್ಕಾಗಿ ನೇಮಕ ಮಾಡಿದ ಸಬ್ ಕಮಿಟಿಯವರ ರಿಪೋರ್ಟು ತಯಾರಾಗದ್ದರಿಂದ ಇನ್ನೊಂದು ಮೀಟಿಂಗಿಗೆ ಇಡಲಾಯಿತು. ಅಲ್ಲದೆ ಸಬ್ ಕಮಿಟಿಯವರು ಬರುವ ಮೀಟಿಂಗಿನೊಳಗೆ ತಮ್ಮ ರಿಪೋರ್ಟನ್ನು ಬ್ಯಾಂಕಿಗೆ ತಲಪಿಸಬೇಕಾಗಿ ಅವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

5. ಬ್ಯಾಂಕಿನ ಮೀಟಿಂಗು ನೋಟೀಸೊಂದು ಡೈರೆಕ್ಟರು ಮೆ. ಸಿ. ಯಂ. ಭೀಮಯ್ಯನವರಿಗೆ ತಲಪದಕ್ಕಾಗಿ ತಾರೀಕು 26-4-38 ರಲ್ಲು ಸಬ್ ಪೋಸ್ಟ್‌ಮಾಸ್ಟರಿಗೆ ಬ್ಯಾಂಕಿನಿಂದ ಬರೆವ ಪತ್ರದ ಮೇರೆ ಸದರಿಯವರು ಬರೆಮು ಕಳುಹಿಸಿದ ಜವಾಬನ್ನು ಓದಿ ರಿಕಾರ್ಡು ಮಾಡಲಾಯಿತು.

6. ಸೌತ್ ಇಂಡಿಯಾ ಇನ್ಶ್ಯೂರೆನ್ಸ್ ಸೊಸೈಟಿಯ ಪರವಾಗಿ ಮೆ. ಟಿ. ಕುಮಾರ ಸ್ವಾಮಯ್ಯ ಅಡ್ವೊಕೇಟರು, ಕೊಡಗು ಲೋಕಲ್ ಬೋರ್ಡು ಕನ್‌ವೀನರರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇರುವ ಮೊಬಲಗನ್ನು ಬಡ್ಡಿ ಸಮೇತ 15 ದಿವಸಗಳೊಳಗಾಗಿ ಮರುಪಾವತಿ ಮಾಡಬೇಕೆಂದು ಬರೆಕೊಂಡ ರಿಜಿಸ್ಟರ್ಡ್ ನೋಟೀಸನ್ನು ಓದಲಾಯಿತು.

ಈ ವಿಷಯದಲ್ಲಿ ರಿಜಿಸ್ಟರ್ಡ್ ನೋಟಿಸಿನ ಒಂದು ನಖಲನ್ನು ಲೋಕಲ್ ಬೋರ್ಡಿನ ಕನ್‌ವೀನರಿಗೆ ಕಳುಹಿಸಿ ಇನ್ಶ್ಯೂರೆನ್ಸ್ ಸೊಸೈಟಿಗೆ ಸದರಿ ಮೊಬಲಗನ್ನು ಕೊಡಬಹುದೊ ಎಂದು ಕೇಳಿಕ್ಕೊಳ್ಳುವಂತೆಯೂ ಮತ್ತು ಈ ಸಂಗತಿಯನ್ನು ಸೊಸೈಟಿಯ ಅಡ್ವೊಕೇಟರಿಗೂ ಸಹ ತಿಳಿಸುವಂತೆಯೂ ತೀರ್ಮಾನವಾಯಿತು.

7. ಬಲ್ಯಮಂಡೂರು ಸೊಸೈಟಿಯ ಪ್ರೆಸಿಡೆಂಟರು ತಮ್ಮ ಸಂಘದ ಮೆಂಬರುಗಳ ಕಿತ್ತಳೆ ತೋಟಗಳನ್ನು ದನಕರಗಳ ಹಾವಳಿಯಿಂದ ಭದ್ರಪಡಿಸಿಕೊಳ್ಳಲು ತಂತಿ ಹಾಕಲಿಕ್ಕಾಗಿ ಬ್ಯಾಂಕಿನಿಂದ ತಕ್ಕ ಧನ ಸಹಾಯಮಾಡಬೇಕೆಂದು ಬರಕೊಂಡ ಪತ್ರವನ್ನು ತಿರಸ್ಕರಿಸಲಾಯಿತು.

8. ಎಡೆನಾಲ್ಕುನಾಡು ಯೂನಿಯನ್ ಪ್ರೆಸಿಡೆಂಟರು ಬ್ಯಾಂಕಿನ ನೌಕರರ ಸಂಬಳವನ್ನು ಕಡಮೆ ಮಾಡಬೇಕೆಂದು ಬರಕೊಂಡ ಪತ್ರವನ್ನು ಆಲೋಚಿಸುವ ಅವಶ್ಯಕತೆ ಇರುವದಿಲ್ಲವೆಂದು ತೀರ್ಮಾನಿಸಲಾಯಿತು.

9. ಒಬ್ಬ ಮಹನೀಯರು ತನ್ನ ಡಿಪಾಜಿಟ್ಟು ಮೊಬಲಗನ್ನು ಬಡ್ಡಿ ರಹಿತ ವಾಪ್ಸು ಕೊಡಬೇಕೆಂದು ಬರಕೊಂಡ ಮೇರೆ ಮಂಜೂರಾಗಲಿಲ್ಲ.

10. ದಿವಂಗತ ರಾ. ಸಾ. ನಡಿಕೇರಿಯಂಡ ಕಾಳಪ್ಪನವರ ಮತ್ತು ಮೆ. ಚಿಟ್ಟೋಳಿಯಮ್ಮನ ಅಪ್ಪುಮಮ್ಮಯ್ಯನವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇರುವ ಮಲೆದೇವರ ಹಣವನ್ನು ಸದರಿ ಟ್ರಸ್ಟಿ ರಾ. ಸಾ. ಕಾಳಪ್ಪನವರು ಗತಿಸಿದ್ದರಿಂದ ಮೆ. ಗಳಾದ ನಡಿಕೇರಿಯಂಡ ಬಿ. ನಂಜಪ್ಪನವರ ಮತ್ತು ಚಿಟ್ಟೋಳಿಯಮ್ಮನ ಅಪ್ಪುಮಮ್ಮಯ್ಯನವರ ಒಂಟಿ ಹೆಸರಿಗೆ ವರ್ಗಾಯಿಸಬೇಕೆಂದು ಕರಡ ಗ್ರಾಮದ ಕೆಲವು ಜನರಿಂದಲೂ ಮತ್ತು ಮಲೆದೇವರ ಭಂಡಾರದ ಲೆಕ್ಕ ಆಡಿಟ್ ಆಗುವ ವರೆಗೆ ಯಾರ ಹೆಸರಿಗೂ ಡಿಪಾಜಿಟ್ಟನ್ನು ವರ್ಗಾಯಿಸಕೂಡದೆಂದು ತಕರಾರಾಗಿ ಇನ್ನಿತರರಿಂದ ಬಂದ ಅರ್ಜಿಗಳನ್ನೂ ಸಹ ಆಲೋಚಿಸಲಾಗಿ ಅವರೆಲ್ಲರೂ ಒಟ್ಟಾರೆ ಸೇರಿ ಒಂದು ತೀರ್ಮಾನಕ್ಕೆ ಬರುವ ವರೆಗೂ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಮೊಬಲಗನ್ನು ಯಾರ ಹೆಸರಿಗೂ ವರ್ಗಾಯಿಸಲಿಕ್ಕಾಗುವುದಿಲ್ಲವೆಂತ ತೀರ್ಮಾನವಾಯಿತು.

11. ಬ್ಯಾಂಕಿನ ವಾರ್ಷಿಕ ಮಹಾ ಸಭೆಯನ್ನು ಮತ್ತು ಪ್ರಾಂತೀಕ ಸಹಕಾರ ಸಮ್ಮೇಳನವನ್ನು ಬರುವ ಡಿಸೆಂಬರ್ ತಾ. 17 ಮತ್ತು 18 ರಲ್ಲು ಯಾ ಡಿಸೆಂಬರ್ 24 ಮತ್ತು 25 ರಲ್ಲು ವೀರಾಜಪೇಟೆ ಗವರ್ನ್‌ಮೆಂಟ್ ಹೈಸ್ಕೂಲ್‌ನಲ್ಲು ನಡಿಸುವಂತೆಯೂ, ಬ್ಯಾಂಕಿನ ಮಹಾ ಸಭೆಗೆ ಸಹಕಾರಿ ಸಂಘಗಳ ರಿಜಿಸ್ಟ್ರಾರನರನ್ನು ಆಧ್ಯಕ್ಷರನ್ನಾಗಿ ಆವ್ಹಾನಿಸುವಂತೆಯೂ, ಸಹಕಾರ ಸಮ್ಮೇಳನಕ್ಕೆ ಪುಶ್ಶೂರಿನ ಅಡ್ವೊಕೇಟರಾದ ಮೆ. ಮಳವಳ್ಳಿ ಶಿವರಾಯರನ್ನು ಆವ್ಹಾನಿಸುವಂತೆಯೂ ತೀರ್ಮಾನವಾಯಿತು. ಅಲ್ಲದೆ ಕಾನ್‌ಫರೆನ್ಸಿನ ಖರ್ಚಿಗೆ ಪ್ರತಿ ಸಂಘದಿಂದ 3 ರೂಪಾಯಿಯಂತೆ ವಸೂಲ್ಮಾಡಬೇಕಾಗಿಯೂ, ಬ್ಯಾಂಕಿನಿಂದ ಜನರಲ್ ಬಾಡಿ ಮೀಟಿಂಗಿಗೆ 200 ರೂಪಾಯಿ ಗ್ರಾಂಟ್ ಕೊಡುವಂತೆಯೂ ತೀರ್ಮಾನವಾಯಿತು. ಮೆ. ಗಳಾದ ಐ. ಪಿ. ಕಾರ್ಯಪ್ಪ, ಸಿ. ಎಂ. ಭೀಮಯ್ಯ ಮತ್ತು ಯಂ. ಎಸ್. ಸೋಮಯ್ಯ ಇವರುಗಳು ಸೇರಿ ಒಂದು ಸ್ವಾಗತ ಕಮಿಟಿಯನ್ನು ಏರ್ಪಡಿಸಬೇಕೆಂದು ಅವರನ್ನು ಕ್ಕೇಳಿಕೊಳ್ಳುವ ಹಾಗೆ ತೀರ್ಮಾನವಾಯಿತು.

12. ಬ್ಯಾಂಕಿನ 1937-38 ನೇ ವರ್ಷದ ರಿಜಿಸ್ಟ್ರಾರವರಿಂದ ಬಂದ ಆಡಿಟ್ ವರದಿಯನ್ನು ಮಂಜೂರ್ಮಾಡಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು. ಮತ್ತು ಎಲ್ಲಾ ಡೈರೆಕ್ಟರುಗಳಿಗೂ ಆಡಿಟ್ ವರದಿಯ ಒಂದೊಂದು ನಖಲನ್ನು ಕಳುಹಿಸುವಂತೆ ತೀರ್ಮಾನಿಸಲಾಯಿತು.

13. ಬ್ಯಾಂಕಿನ ಹೆಡ್ ಗುಮಾಸ್ತರು ತನಗೆ ತಾರೀಕು 19-10-38 ರಿಂದ 28-10-38ರ ವರೆಗೆ ಮತ್ತು 31-10-38 ರಿಂದ 6-11-38 ರ ವರೆಗೆ ಕಾಯಿಲೆಯ ರಜ ಮಂಜೂರ್ಮಾಡಬೇಕೆಂದು ಬರಕೊಂಡ ಮೇರೆ ಮಂಜೂರ್ಮಾಡಲಾಯಿತು.

14. ಕುಂಜಲಗೇರಿ ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ವಾಯಿದೆ ಮೀರಿದ ಸಾಲಕ್ಕೆ ಹೆಚ್ಚಿನ ಸಮಯ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

15. ಜೆಂಬೆಬೆಳಿಯೂರು ಸಂಘವು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ಜುಮ್ಲ ಸಾಲದ ಮೊಬಲಗಿಗೆ (ಈ ಸಂಘಕ್ಕೆ ಸಂಯೋಜನೆಯೂದ ಸಂಘಗಳದ್ದು ಸೇರಿ) 8 ಕಂತುಗಳನ್ನು ಕೊಟ್ಟು ಹೊಸ ಕರಾರು ಬರಸಿಕೊಳ್ಳಬೇಕೆಂದು ಬರಕೊಂಡ ಅರ್ಜಿಯನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

16. ಸಹಕಾರ ದಿನಾಚರಣೆಯನ್ನು ತಾ. 5-11-38 ರಲ್ಲು ನಡೆಸಲು ಎಡೆನಾಲ್ಕುನಾಡು ಯೂನಿಯನ್ ಪ್ರೆಸಿಡೆಂಟರ ಕೋರಿಕೆ ಮೇರೆ ಎಲ್ಲಾ ಯೂನಿಯನ್‌ಗಳಿಗೂ 10 ರೂಪಾಯಿ ಪ್ರಕಾರ ಮಂಜೂರ್ಮಾಡಲಾಯಿತು.

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷರು.)

ಎಂಬ್ರೋಸಿಯೊ.

ಸಾವಿರಾರು ಹೆಂಗಸರ ಕಾಯಿಲೆಗಳನ್ನು ನಿವಾರಿಸಿದೆ.

ಹೆಸರುವಾಸಿಯೂದ ಡಾಕ್ಟರುಗಳಿಂದಲೂ, ಉಪಯೋಗಿಸಿ ತೃಪ್ತಿಗೊಂಡವರಿಂದಲೂ ಎಂಬ್ರೋಸಿಯೂವು ಹೆಂಗಸರ ರೋಗಗಳಿಗೆ ಹೆಸರುಗೊಂಡಿದೆ.

ಬಾಟ್ಲಿಗೆ ರೂ. 2-0-0.
ಸಣ್ಣ ಬಾಟ್ಲಿಗೆ ಆ. 0-15-0.
ಸೋಲ್ ಏಜೆಂಟ್-ವಿ. ರಾಮು & ಕೋ.
ಬೋಂಬೆ 2.

2

ಡಾ. ಮೇತ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಸಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.



FOR SALE.

One big storeyed tiled house with a number of tiled out houses and with extensive compound and 1½ acres of Coffee Estate, banana gardens situated in Brahmin Valley and known as extreasurer A. P. Subbaya's house. Rs. 6000/- or nearest offer acceptable.

A. P. Seetharamiah,
Brahmin Valley,
4-3 Mercara.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷ್ಯಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮುಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52–21 ಬೆಂಗಳೂರು ಸಿಟಿ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ೧೮೯೪

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.
ಮತ್ತು ಕಂಪೆನಿ,
(52–49) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಷೀನರ ಕೊಡಗು ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.
ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತವ್ಯನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ವಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂದ ಪೂವಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಜ. ಮುದ್ದಯ್ಯನವರು.
ಹುದಿಕೇರಿ—ಮೆ. ಅಜ್ಜಮಡ ಮಾದಪ್ಪನವರು ಮತ್ತು ಮೆ. ಜಿ. ಮೂವಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮೂಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಬೆಳ್ಳಿಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅವೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ [illegible] ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಪತ್ರಗಳಿಗೆ [illegible] ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.
52–36

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲು ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ಪ್ರಮಾಣ ಒಮ್ಮತಿಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

18 ಸಿ. ಜೆಚ್. ರಾಮಯ್ಯಣ್ಣಿ ವೈದ್ಯರ್.

ಮೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘೆಗಳ ಮತ್ತು ದನಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ** ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಿಮ್ಮಮುಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದನಸಭಂಡಾರದ ಖರೀದಿ, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳು ಬೆಲೆ: 0-1-0
೨ ಹೊಸ ಮಾದರಿ ,, ,, 0-1-3
೩ ಮೆಡಿಕೇಟಿಡ್ ನಂ. ೧, ಸೀಸೆಯಲ್ಲಿ ,, 0-4-0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೆಳತಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ: 0-8-0 ಮತ್ತು ರೂ. 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:—
ಮಡಿಕೇರಿ:—ಮೆಸರ್ಸ್ ದಿ. ಮಂಗಳೂರು ಸ್ಟೋರ್ಸ್, ಮತ್ತು ಚಕ್ರಪಾಣಿ ಶೆಟ್ಟಿ, ಸ್ಟೇಷನರ್ಸ್ ಮತ್ತು ಬುಕ್ ಸೆಲ್ಲರ್ಸ್.
ಸೋಮವಾರಪೇಟೆ:—ಪುಟ್ಟಯ್ಯ ಶೆಟ್ಟಿ & ಸನ್ಸ್.
ಫ್ರೇಜರ್‌ಪೇಟೆ:—ಕೃಷ್ಣಯ್ಯ ಶೆಟ್ಟಿ & ಸನ್ಸ್, ಮತ್ತು ಮೈಲಾರ್ ಶೆಟ್ಟಿ & ಸನ್ಸ್.
ವೀರಾಜಪೇಟೆ:—ರಾಮಕೃಷ್ಣ ರಾವ್, ಜಾಂಡೂ ಫಾರ್ಮಸಿಯ ಏಜೆಂಟರು.
ಗೋಣಿಕೊಪ್ಪಲು:—ಎ. ಎನ್. ಹುಚ್ಚಯ್ಯ, ಜನರಲ್ ಮರ್ಚೆಂಟ್. [32]

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ -
'ಕೊಡಗು' ವಾರ ಪತ್ರಿಕೆಗೆ
ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಆಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

ಮೆ. ಎಲ್. ಎಫ್. ಸಿ: ನಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

52-45

Printed & Published by P. I. Belliappa, at 'Kodagu' Press Mercara for 'Kodagu' Ltd.